EMAIL : dairyadadaari@gmail.com ಸಂಪುಟ: 01 ಸಂಚಿಕೆ: 178

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 23–06–2026


## ಕಾಂಗ್ರೆಸ್– ಬಿಜೆಪಿ ಮಧ್ಯೆ 'ನೀಟ್' ವಾಗ್ಯುದ್ಧ

**ಬೆಂಗಳೂರು, ಜೂ.22:** ಕಾಂಗ್ರೆಸ್ ಕಾರ್ಯಕ್ರಮದಿಂದಾಗಿ 'ನೀಟ್' ಮರುಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿರುಗೇಟು ನೀಡಿದ್ದಾರೆ.ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಸಾಲು ಸಾಲು ಪರೀಕ್ಷಾ ಹಗರಣಗಳ ಮೂಲಕ ದೇಶದ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿರುವ ಕೇಂದ್ರ ಸರ್ಕಾರ, ತನ್ನ ವೈಫಲ್ಯವನ್ನು ಮುಚ್ಚಿಹಾಕಲು ಕಾಂಗ್ರೆಸ್ ಪಕ್ಷದ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದೇ ನಾವು ಭಾನುವಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಪೊಲೀಸರ ಜೊತೆ ಮುಂಚಿತವಾಗಿಯೇ ಚರ್ಚಿಸಿ, ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬೆಳಗ್ಗೆ 10:30ರ ವೇಳೆಗೆ ಕಾರ್ಯಕ್ರಮಕ್ಕೆ ಬರಬೇಕಿದ್ದ ಎಲ್ಲ ಬಸ್‌ಗಳು ಅರಮನೆ ಮೈದಾನವನ್ನು ತಲುಪಿದ್ದವು. ಆದರೂ ಕೆಲವು ಕಡೆ ತಪ್ಪುಗಳು ನಡೆದು ಸಂಚಾರ ದಟ್ಟಣೆಯಾಗಿರುವುದು ನಿಜ ಎಂದು ಒಪ್ಪಿಕೊಂಡರು.

ಒಂದು ವೇಳೆ ನಮ್ಮ ಕಾರ್ಯಕ್ರಮದಿಂದಾಗಿ ಯಾವೊಬ್ಬ



ವಿದ್ಯಾರ್ಥಿಗಾದರೂ ನಿಜವಾಗಿಯೂ ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ ಎನ್ನುವುದಾದರೆ, ನಾನು ವೈಯಕ್ತಿಕವಾಗಿ ವಿಷಾದ ವ್ಯಕ್ತಪಡಿಸುತ್ತೇನೆ. ಆ ವಿದ್ಯಾರ್ಥಿಗಳಿಗೆ ಮುಂದಿನ ಪರೀಕ್ಷೆ ಎದುರಿಸಲು ಕಾಂಗ್ರೆಸ್ ಪಕ್ಷದಿಂದ ಎಲ್ಲಾ ರೀತಿಯ ಅಗತ್ಯ ಸಹಾಯ ಮತ್ತು ಬೆಂಬಲವನ್ನು ನೀಡಲು ನಾವು ಸಿದ್ಧರಿದ್ದೇವೆ. ಈಗಾಗಲೇ ನಮ್ಮ ತಂಡ ಅಂತಹ ವಿದ್ಯಾರ್ಥಿಗಳನ್ನು ಸಂಪರ್ಕಿಸುವ ಕೆಲಸ ಮಾಡುತ್ತಿದೆ" ಎಂದು ಭರವಸೆ ನೀಡಿದರು.

ಅಲ್ಲದೆ, ಪರೀಕ್ಷೆ ಬರೆದಿರುವುದಾಗಿ ಸ್ವತಃ ವಿದ್ಯಾರ್ಥಿಗಳೇ ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದರೂ, ಬಿಜೆಪಿ ನಾಯಕರು ಅವರಿಂದ ಬಲವಂತವಾಗಿ ಸುಳ್ಳು ಹೇಳಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಇನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ಮೂರು ಬಾರಿ ನೀಟ್ ಪರೀಕ್ಷೆಯನ್ನು ಮುಂದೂಡಿದ್ದು,ಹತ್ತಾರು ಪ್ರಮುಖ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ನಿರಂತರವಾಗಿ ಸೋರಿಕೆಯಾಗುತ್ತಿವೆ. 12 ವಿದ್ಯಾರ್ಥಿಗಳ ಆತ್ಮಹತ್ಯೆ: ಪರೀಕ್ಷಾ ಅಕ್ರಮ ಹಾಗೂ ಮಾನಸಿಕ ಒತ್ತಡ ತಾಳಲಾರದೆ ದೇಶದಲ್ಲಿ ಈಗಾಗಲೇ 12 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಷ್ಟಾದರೂ ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಕನಿಷ್ಠ ಸಂತಾಪವನ್ನೂ ಸೂಚಿಸಿಲ್ಲ, ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನೂ ನೀಡಿಲ್ಲ ಎಂದು ಕಿಡಿಕಾರಿದರು.

ಇದಲ್ಲದೆ, ಬಿಜೆಪಿ ಮೊದಲು ವಿದ್ಯಾರ್ಥಿಗಳ ಹಾಗೂ ದೇಶದ ಕ್ಷಮೆ ಕೇಳಲಿ. ಕಾಂಗ್ರೆಸ್ ಪಕ್ಷವು ಯಾವಾಗಲೂ ವಿದ್ಯಾರ್ಥಿಗಳ ಪರವಾಗಿಯೇ ಇರಲಿದ್ದು, ಅವರ ನ್ಯಾಯಯುತ ಹೋರಾಟಕ್ಕೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಲಿದೆ. ಮೊದಲು ಮೋದಿ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ದೇಶದ ಜನತೆಗೆ ಉತ್ತರ ನೀಡಲಿ ಎಂದು ಆಗ್ರಹಿಸಿದರು.

## ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಒತ್ತಾಯಿಸಿ ಪ್ರಧಾನಿಗೆ ಪ್ರಸ್ಥಾವನೆ ಸಲ್ಲಿಕೆ



**ಕಲಬುರಗಿ/ರಾಯಚೂರು,ಜೂ.22–**ಮಹಾತ್ವಾಕಾಂಕ್ಷಿ ಜಿಲ್ಲೆ ಮತ್ತು ಭಾರತ ಸರ್ಕಾರದಿಂದ 371ನೇ (ಜೆ) ಸ್ಥಾನಮಾನ ಪಡೆದಿರುವ ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದ ಅತ್ಯಂತ ಹಿಂದುಳಿದ ಜಿಲ್ಲೆಯಾದ ರಾಯಚೂರಿನಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ವತಿಯಿಂದ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಲಕ್ಷ್ಮಣ ದಸ್ತಿಯವರ ನೇತೃತ್ವದಲ್ಲಿ ಕಲಬುರಗಿ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಮನೀಷ್ ಜಾಜು, ಲಿಂಗರಾಜ ಸಿಂಗಾಪೂರ,ಉದಯ ಕುಮಾರ ಜೇವರ್ಗಿ, ಮಲ್ಲಿನಾಥ.ಕೆ.ಮಲ್ಲಿಕಾರ್ಜುನ ಬೋಸನೂರ್, ರೌಫ ಖಾದ್ರಿ, ಮುತ್ತಣ್ಣ ನಡಗೇರಿ,ಮಲ್ಲು ಮುಧಖೇಡ್ , 2ನೇಪುಟಕ್ಕೆ

## ಚೆಕ್‌ಡ್ಯಾಂಗಳನ್ನು ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಿ: ಬಸವರಾಜ ನಕ್ಕುಂದಿ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಾಲೂಕು ಪಂಚಾಯತ್ ಅವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ ಜಿಲ್ಲಾ ಸಮಿತಿ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮೀಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತರ ಕಾರ್ಮಿಕ ಸಂಘ ,ದಲಿತ ಸಮರ ಸೇನೆ ,ಕರ್ನಾಟಕ ಸ್ಲಮ್ ಜನರ ಕ್ರಿಯಾ ವೇದಿಕೆ ,ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಬಣ ಸಂಘಟನೇಯಾ ಸಂಯುಕ್ತಾಶ್ರಯದಲ್ಲಿ ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಚೆಕ್‌ಡ್ಯಾಂಗಳನ್ನು ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿರುವುದನ್ನು ವಿರೋಧಿಸಿ ಪ್ರತಿಭಟನೆ ಧರಣಿ ನಡೆಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯ ಜಿಲ್ಲಾಧ್ಯಕ್ಷರಾದ ಬಸವರಾಜ ನಕ್ಕುಂದಿ ಮಾತನಾಡಿ ರಾಜ್ಯ ಸರಕಾರವು ಅಂತರ್ಜಲಮಟ್ಟವನ್ನು ವೃದ್ದಿಸುವುದು, ರೈತರ ಜಮೀನುಗಳಿಗೆ ನೀರು ಹರಿಸುವುದಕ್ಕೆ ಅಗತ್ಯ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಹಳ್ಳಗಳಿಗೆ, ನಾಲೆಗಳಿಗೆ, ಗುಡ್ಡಗಾಡು ಪ್ರದೇಶವಿರುವ ಕಡೆ ಚೆಕ್ ಡ್ಯಾಂ ಗಳನ್ನು ನಿರ್ಮಾಣಮಾಡುವ ಕಾಮಗಾರಿಯನ್ನು ಕೈಗೊಂಡಿದು ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ 80 ಕ್ಕೂ ಹೆಚ್ಚು ಚೆಕ್‌ಡ್ಯಾಂಗಳನ್ನು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಅತ್ಯಂತ ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿದ್ದು ನಿಯಮದಂತೆ ಎಸ್.ಇ.ಪಿ,. ಟಿ.ಎಸ್.ಪಿ. ಯೋಜನೆಯಡಿಯಲ್ಲಿ ದಲಿತರ ಜಮೀನುಗಳಿಗೆ ನೀರವಾರಿಯನ್ನು ಕಲ್ಪಿಸುವುದಕ್ಕಾಗಿ ಪ.ಜಾತಿ,ಪ,ಪಂಗಡ ಸಮುದಾಯಗಳ ರೈತರ ಜಮೀನಿರುವ ಕಡೆ ಚೆಕ್ ಡ್ಯಾಂಗಳನ್ನು ಕಟ್ಟದೆ ಸಾಮಾನ್ಯ ವರ್ಗಕ್ಕೆ ಸೇರಿದ ರೈತರು ಹೆಚ್ಚಿರುವ ಕಡೆ ಚೆಕೆಡ್ಯಾಂಗಳನ್ನು ನಿರ್ಮಾಣ ಮಾಡಲಾಗಿರುವುದರಿಂದ ಪ.ಜಾತಿ,ಪ,ಪಂಗಡ ಸಮುದಾಯಗಳ ರೈತರಿಗೆ ಅನ್ಯಾಯವಾಗಿದೆ. ಅದ್ದರಿಂದ ಸರಕಾರದಿಂದ ಚೆಕ್ ಡ್ಯಾಂಗಳ ನಿರ್ಮಾಣದಲ್ಲಿ ನಡೆದಿರುವ ಅವ್ಯಾವಹರವನ್ನು ಸಂಪೂರ್ಣವಾಗಿ ತನಿಖೆಗೆ ಒಳಪಡಿಸಿ



ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕ ಸಂಘದ ಅಧ್ಯಕ್ಷರಾದ ಪರಶುರಾಮ್ ಬಾಗಲವಾಡ, ದಲಿತ ಚಳುವಳಿ ತಾ.ಅಧ್ಯಕ್ಷರಾದ ಚಂದ್ರಶೇಖರ ನಾಯಕ, ದಲಿತ ಸಮರ ಸೇನೆ ತಾ.ಅಧ್ಯಕ್ಷರಾದ ಅನೀಲ್ ಕುಮಾರ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರ.ಕಾರ್ಯದರ್ಶಿ ನರಸರೆಡ್ಡಿ , ವಿದ್ಯಾರ್ಥಿ ಒಕ್ಕೂಟದ ರಾಜ್ಯ ಪ್ರ.ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರ್, ದ.ಸಂಘರ್ಷ ಸಮಿತಿ ಕಾರ್ಯದರ್ಶಿ ವೆಂಕಟೇಶ್, ಅಮರೇಶ್ ಜಾಗೀರ್ ಪನ್ನೂರು ,ಶಾಂತರಾಜ್ ಪನ್ನೂರ್ ಸೇರಿದಂತೆ ಇನ್ನಿತರರು ಇದ್ದರು.

## ಯೋಗ ನಮ್ಮನ್ನು. ದೈಹಿಕ ಮತ್ತು ಮಾನಸಿಕವಾಗಿ ಸಮೃದ್ಧ ಮತ್ತು ಶಸಕ್ತರನ್ನಾಗಿ ಮಾಡುತ್ತದೆ.ಬಿ.ಕೆ .ಸ್ಮಿತ ಅಕ್ಕ




ಧೈರ್ಯದ ದಾರಿ

ರಾಯಚೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದಲ್ಲಿ ದಿನಾಂಕ 21 ರಂದು ಹಲವು ವಿಶಿಷ್ಟ ಕಾರ್ಯಕ್ರಮಗಳಿಗೆ ಸಾಕ್ಷಿಯಿತು. ಮೊಟ್ಟಮೊದಲನೆಯದಾಗಿ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಬಹಳ ಅರ್ಥಪೂರ್ವಕವಾಗಿ ಆಚರಿಸಲಾಯಿತು. ಸಂಸ್ಥೆಯ ಮುಖ್ಯಸ್ಥರಾದ ಬಿ.ಕೆ ಸ್ಮಿತಾ ಅಕ್ಕನವರು ಮಾತನಾಡಿ .ಯೋಗ ನಮ್ಮನ್ನು ಆಂತರಿಕವಾಗಿ ಮತ್ತು ದೈಹಿಕವಾಗಿ ಮಾನಸಿಕವಾಗಿ ಸಮೃದ್ಧ ಮತ್ತು ಶಸಕ್ತರನ್ನಾಗಿ ಮಾಡುತ್ತದೆ .ಎಂದು ವಿವರಿಸಿದರು ಸುಮಾರು 15 ದಿನಗಳ ಕಾಲ ಯುಗಾಭ್ಯಾಸವನ್ನು ಮಾಡಿಸಿದ ಯೋಗ ಗುರುಗಳಾದ ಅಮರೇಶ್ ದಂಪತಿಗಳಿಗೆ ಸನ್ಮಾನಿಸಲಾಯಿತು. ಅದೇ ರೀತಿಯಾಗಿ .ಈ ದಿನ ವಿಶಿಷ್ಟ ದಿನ ವಿಶ್ವ ಅಪ್ಪಂದಿರದ ದಿನದ ಪ್ರಯುಕ್ತ ತಂದೆಯವರನ್ನು ಸ್ಮರಿಸುವ ಅವರ ತ್ಯಾಗವನ್ನು ಸಮರಿಸುವ ಈ ದಿನದ ವಿಶಿಷ್ಟತೆಯಂತೆ ಆಶ್ರಮಕ್ಕೆ ಆಗಮಿಸುವ ಸದಸ್ಯರನ್ನು ವೇದಿಕೆ ಆಹ್ವಾನಿಸಿ ಮಾತನಾಡಿಸಿ ಸನ್ಮಾನಿಸಿ ಗೌರವಿಸಲಾಯಿತು .ಅದೇ ತರನಾಗಿ ಇಂದಿನ ಮತ್ತೊಂದು ವಿಶಿಷ್ಟತೆ ವಿಶ್ವ ಸಂಗೀತ ಕಲಾ ದಿನದ ಪ್ರಯುಕ್ತ ರಾಯಚೂರಿನ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಹೊಂದಿದ ಸಂಗೀತ ಗುರುಗಳಾದ ಡಾ. ಪಂಡಿತ್ ನರಸಿಂಹಲು ವಡವಾಟಿ ಆತ್ಮೀಯವಾಗಿ ಈಶ್ವರಿ ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನಿಸಿ ಅವರ ಸಂಗೀತ ಸೇವೆಯ ಗೆ ಗೌರವಪೂರ್ಣವಾಗಿ ಸನ್ಮಾನಿಸಲಾಯಿತು .ಅದೇ ತರನಾಗಿ ಖ್ಯಾತ ಗಾಯಕರಾದ ಡಾ. ಶರಣಪ್ಪ ಗೋನಾಳ್ ಮತ್ತು ಅವರ ಪುತ್ರಿಯಾದ ಶ್ರೀಮತಿ ಪ್ರತಿಭಾ ಗೋನಾಳ್ ಸಹ ಇಂದಿನ ಕಾರ್ಯಕ್ರಮದಲ್ಲಿ ಅವರನ್ನು ಆತ್ಮೀಯವಾಗಿ ಗೌರವಿಸಲಾಯಿತು, ಡಾ ಪಂಡಿತ್ ನರಸಿಂಹಲ ವಡವಾಟಿ.ಮತ್ತು ಪ್ರತಿಭಾ ಗೋನಾಳ ಹಾಡುಗಳನ್ನು ಹಾಡಿದರು . ಮಾಹಿತಿಯ ಹಕ್ಕು ಆಯೋಗದ ಆಯುಕ್ತರಾದ ಕಲ್ಬುರ್ಗಿ ಪೀಠದ ಶ್ರೀ ಬಿ ವೆಂಕಟ ಸಿಂಗ್ ಅವರನ್ನು ಮುಖ್ಯ ಅತಿಥಿಗಳಾಗಿ ಈ ಒಂದು ವಿಶಿಷ್ಟ ದಿನದಂದು ಸಂಸ್ಥೆಗೆ ಆಹ್ವಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಯುತ ರು ಮಾತನಾಡುತ್ತಾ ಈ.ಸಂಸ್ಥೆಯ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟವಾದ ಸೇವೆಯನ್ನು ಸಲ್ಲಿಸುತ್ತದೆ. ಸಂಸ್ಥೆ ಕಾರ್ಯಕ್ರಮಗಳು, ಸಮಾಜದ ಪ್ರತಿಯೊಬ್ಬರಿಗೂ ತಲುಪುತ್ತವೆ ಎಂದು ಮೆಚ್ಚಿಗೇಯನ್ನ ವ್ಯಕ್ತಪಡಿಸಿದರು. ಈ ದಿನದಂದು ರಾಯಚೂರು ಮಹಾನಗರ ಪಾಲಿಕೆ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಬೇರೆ ಬೇರೆ ರೀತಿಯ ಕಸಗಳನ್ನ ಬೇರೆಬೇರೆ ರೀತಿ ವಿಂಗಡನೆ ಮಾಡಿ ಇಟ್ಟುಕೊಳ್ಳುವ ಕುರಿತು ಬಹಳ ಅರ್ಥಪೂರ್ಣವಾಗಿ ಮಾಹಿತಿಯನ್ನು ಶ್ರೀನಿವಾಸ್ ನೀಡಿದರು ಮಹಾನಗರ ಪಾಲಿಕೆ ಸಿಬ್ಬಂದಿಯನ್ನು ಈ ಸಂದರ್ಭದಲ್ಲಿ ಅವರ ಸೇವೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕರಾದ ರಾಜಯೋಗಣಿ ಸ್ಮಿತಾ ಅಕ್ಕನವರು ಮಾತನಾಡುತ್ತಾ .ನಮ್ಮ ರಾಯಚೂರು ನಗರದ ಜನ ಪ್ರಜ್ಞಾ ಪೂರಕವಾಗಿ ಇತ್ತೀಚಿನ ದಿನಗಳಲ್ಲಿ ಸ್ವಚ್ಛತೆ ಕುರಿತು ಕಾರ್ಯದಲ್ಲಿ ತೊಡಗಿದ್ದಾರೆ . ನಗರವನ್ನು ರಾಜ್ಯದ ಸ್ವಚ್ಛ ನಗರಗಳಲ್ಲಿ ಒಂದಾಗಿಸಬೇಕು. ಆ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರಿಕನು ಹಸಿ ಕಸ .ಒಣ ಕಸ .ಬೇರೆ ಬೇರೆ ರೀತಿಯಲ್ಲಿ ವಿಂಗಡನೆ ಮಾಡಿ ಮಹಾನಗರ ಪಾಲಿಕೆಯ ಸಿಬ್ಬಂದಿ ಬಂದಾಗ ಅವರಿಗೆ ಕೊಡಬೇಕು ಎಂದು ತಮ್ಮ ಮಾತುಗಳನ್ನು ವ್ಯಕ್ತಪಡಿಸಿದರು .ಈ ಸಂದರ್ಭದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ವತಿಯಿಂದ ವಿದ್ಯಾಲಯಕ್ಕೆ ಆಗಮಿಸುವ ಸದಸ್ಯರಿಗೆ ಹಸಿ ಕಸ ಮತ್ತು ಒಣ ಕಸ ವನ್ನು ಬೇರೆ ಬೇರೆ ವಿಂಗಡಿಸಿಸಲು ಪ್ಲಾಸ್ಟಿಕ್ ಕಂಟೇನರ್ ಗಳನ್ನು ವಿತರಿಸಲಾಯಿತು. ಕಲ್ಬುರ್ಗಿ ವಿಭಾಗ ಮಟ್ಟದ ಮಾಹಿತಿ ಹಕ್ಕು ಆಯೋಗದ ಆಯುಕ್ತರಾದ ವೆಂಕಟ ಸಿಂಗ್ ಈಶ್ವರ ವಿಶ್ವವಿದ್ಯಾಲಯದ ಪ್ರಮುಖ ಸಮಾಜಮುಖಿ ಕಾರ್ಯಕ್ರಮದ ನಶಾಮುಕ್ತ 2ನೇ ಪುಟಕ್ಕೆ

## ದಲಿತ ಮುಖಂಡ ರಾಜು ಬೊಮ್ಮನಾಳ ಮೇಲಿನ ಹಲ್ಲೆ ಮಾಡಿದ ಅರೋಪಿಗಳ ಮೇಲೆ ಕ್ರಮಕ್ಕೆ ಒತ್ತಾಯಿಸಿ ಮನವಿ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಡಾ.ಎನ್,ಮೂರ್ತಿ ಬಣ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಅಧ್ಯಕ್ಷರಾದ ಮಾರೆಪ್ಪ ಮಳ್ಳಿ ಮಾತನಾಡಿ ರಾಯಚೂರು ಜಿಲ್ಲಾ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮುಖಂಡರಾದ ರಾಜು ಬೊಮ್ಮನಾಳ ರವರ ಮೇಲೆ ಮೇ.21 ರಂದು ರಾಯಚೂರು ನಗರದ ಬಸ್ ನಿಲ್ದಾಣದಲ್ಲಿ ಮಾರಣಾಂತಿಕವಾಗಿ ಹಲ್ಲೆ ಮಾಡಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಅವರಿಗೆ ಹಾಗೂ ಅವರ ಕುಟುಂಬದವರಿಗೆ ಸೂಕ್ತವಾದ ಭದ್ರತೆಯನ್ನು ಪೊಲೀಸ್ ಇಲಾಖೆ ನೀಡ ಬೇಕು ಎಂದು ಒತ್ತಾಯಿಸಿದರು



ವಿಜಯ, ತಿಪ್ಪಣ್ಣ ಬೋಮ್ಮನಾಳ್, ಹುಲಗಪ್ಪ ಚೀಮ್ಲಾಪುರ್,ಈಶಪ್ಪ ,ಮಲ್ಲೇಶ , ಗಂಗಪ್ಪ ,ಬೈಲಮರ್ಚೆಡ್, ಆನಂದಪ್ಪ ಮಾಡಗಿರಿ,ಬಾಲಸ್ವಾಮಿ ,ಹನುಮಂತಪ್ಪ ಕೊರವಿ,ಲವಕುಶ, ಸೇರಿದಂತೆ ಇನ್ನಿತರರು ಇದ್ದರು.

## ರಾಯಚೂರಿಗೆ ಏಮ್ಸ್ ಸ್ಥಾಪನೆಗೆ ಆಗ್ರಹಿಸಿ ಸಿರವಾರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ



ಧೈರ್ಯದ ದಾರಿ

**ಸಿರವಾರ, ಜೂನ್ 22:** ರಾಯಚೂರು ಜಿಲ್ಲೆಗೆ 'ಏಮ್ಸ್' (AIIMS) ಮಂಜೂರು ಮಾಡಬೇಕೆಂದು ಒತ್ತಾಯಿಸಿ, ತಾಲೂಕು ಏಮ್ಸ್ ಹೋರಾಟ ಸಮಿತಿಯ ನೇತೃತ್ವದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದೊಂದಿಗೆ ಸೋಮವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಮೆರವಣಿಗೆಯ ವಿವರ: ಪಟ್ಟಣದ ಬಯಲು ಹನುಮಾನ್ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಹಸೀಲ್ದಾರ್ ಕಚೇರಿಯನ್ನು ತಲುಪಿತು. ಈ ವೇಳೆ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ರಾಯಚೂರಿಗೆ ಏಮ್ಸ್ ನೀಡಲೇಬೇಕೆಂದು ಪಟ್ಟು ಹಿಡಿದರು. ಬಳಿಕ ತಹಸೀಲ್ದಾರ್ ಅಶೋಕ ಪವಾರ ಅವರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಹೋರಾಟಗಾರರ ಪ್ರಮುಖ ಬೇಡಿಕೆಗಳು ಮತ್ತು ವಾದಗಳು:ಅನ್ಯಾಯದ ಅಸಮಾಧಾನ: ಐಐಟಿ ಸ್ಥಾಪನೆಗೆ ಸೂಕ್ತ ಮಾನದಂಡಗಳಿದ್ದರೂ ರಾಯಚೂರಿಗೆ ಅವಕಾಶ2ನೇಪುಟಕ್ಕೆ

## ಮೊದಲನೇ ಪುಟದಿಂದ

# ಯೋಗ ನಮ್ಮನ್ನು. ದೈಹಿಕ ಮತ್ತು ಮಾನಸಿಕವಾಗಿ ಸಮೃದ್ಧ ಮತ್ತು ಶಸಕ್ತರನ್ನಾಗಿ ಮಾಡುತ್ತದೆ.ಬಿ.ಕೆ .ಸ್ಮಿತ ಅಕ್ಕ

ಭಾರತ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾ ಡುತ್ತಾ ಪ್ರತಿಯೊಬ್ಬ ರು ಆತ್ಮ ಸಂಯುಮನ್ನ ಹೊಂದಿರಬೇಕು ನಿಶಾ ನಮ್ಮನ್ನು ಶೈಕ್ಷಣಿಕವಾಗಿ ಬ್ರಹ್ಮನ ನಿರಶನ ಮಾಡುತ್ತದೆ ಆದರೆ ಆತ್ಮಸಾಯವನ್ನು ಹೊಂದಿರಬೇಕು ಭ್ರಮರ ನಿರೀಶನ ಮಾಡುತ್ತದೆ ಆದರೆ ಶಾಶ್ವತ ಶಾಂತಿ ಸುಖಕ್ಕಾಗಿ ರಾಜ್ಯ ಯೋಗದಂತ ಯೋಗ ಅಭ್ಯಾಸಗಳನ್ನು ತಮ್ಮ ಜೀವನದಲ್ಲಿ ಅಳವಡಿಸಬೇಕೆಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರ ರಾಧಾ ಬಿಕೆ ಸ್ಮಿತಾ ಅಕ್ಕನವರು ಮಾತನಾಡಿ ಭಾರತ ಸರ್ಕಾರವು ಈಶ್ವರಿ ವಿಶ್ವವಿದ್ಯಾಲಯದೊಂದಿಗೆ ನಮ್ಮವರು ಆಡಂ ಆಫ್ ಅಂಡಸ್ಟ್ಯಾರ್ಂಡಿಂಗ್ ಮಾಡಿಕೊಂಡು ಸಂಸ್ಥೆಯ ಸೇವೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಇಂಥ ಮಹತ್ವಪೂರ್ಣ ಜವಾಬ್ದಾರಿಯನ್ನ ಸಂಸ್ಥೆ ವಹಿಸಿರುವುದನ್ನು ಅವರು ಸ್ಮರಿಸಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಾರತೀಯ ರೇಣುಕಾ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ ಮಾತನಾಡಿ ಇಂದು ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯಲ್ಲಿ ಹಲವಾರು ಕಾರ್ಯಕ್ರಮಗಳ ಸಂಗಮವಾಗಿದೆ ಒಂದು ಯೋಗಾ ದಿನಾಚರಣೆ ಎರಡು ಸಂಗೀತ ಕಲಾವಿದರಿಗೆ ಗೌರವದ ಸನ್ಮಾನ 3 ಮಹಾನಗರ ಪಾಲಿಕೆಯ ಹಸಿಕಸ ಒಣ ಕಸ ವಿಂಗಡಣೆ ಕುರಿತು ಮಾಹಿತಿ ಜೊತೆಗೆ ಅಪ್ಪಂದಿರ ದಿನ ಇಂತಹ ಮಹತ್ವದ ಕಾರ್ಯಕ್ರಮಗಳನ್ನ ಆಯೋಜನೆ ಮಾಡಿ ಇವತ್ತು ಈ ಸಭಾಂಗಣವು ತುಂಬಿ ರುವುದು ಬಿಕೆ ಸ್ಮಿತಾ ಅಕ್ಕನವರ ಮೇಲೆ ಇರುವಂತಹ ಅಭಿಮಾನ

ಪ್ರೀತಿ .ಭಕ್ತಿ . ಗೌರವ ಎಂದರೆ ತಪ್ಪಾಗಲಾರದು ಯೋಗವನ್ನ ಪ್ರತಿಯೊಬ್ಬರು ಕಲಿಯಿರಿ ರೋಗದಿಂದ ದೂರವಿರಿ ನಾಶಮುಕ್ತ ಭಾರತ ನಶಮುಕ್ತ ಕರ್ನಾಟಕ ನಶಮುಕ್ತ ರಾಯಚೂರು ಜಿಲ್ಲೆಯಲ್ಲಿನ ಮಾಡಲು ಪ್ರತಿಯೊಬ್ಬರು ಇಂಥ ಉತ್ತಮ ಕಾರ್ಯಕ್ಕೆ ಕೈಜೋಡಿಸಬೇಕು ಭಾರತವು ಸುಂದರ ಸ್ವಚ್ಚವಾಗಿರಬೇಕಾದರೆ ಕಸ ವಿಲೇವರಿಯು ಪ್ರತಿಯೊಬ್ಬ ನಾಗರಿಕರ ಕರ್ತವವಾಗಿದೆ ನಮ್ಮ ಈ ಭೂಲೋಕಕ್ಕೆ ಬರಲು ಕಾರ್ಮಿಕರ್ತನಾದ ತನ್ನ ಹೆಗಲ ಮೇಲೆ ನಮ್ಮನ್ನ ಕೂಡಿಸಿಕೊಂಡು ಊರನ್ನ ತೋರಿಸಿ ನಮ್ಮ ಕಾರ್ಯಕ್ಕೆ ಬೆನ್ನು ಚಪ್ಪರಿಸಿದ ತಂದೆಯವರ ಸೇವೆಯನ್ನ ಪ್ರತಿಯೊಬ್ಬರು ಮಕ್ಕಳು ಎಂದು ಡಾ ಬಿರಾದಾರ ಹೇಳಿದರು. ಸಂಸ್ಥೆಯ ಸಹಸಂಚಾಲಕರಾದ ಶಾರದಾ ಅಕ್ಕನವರು ಕಾರ್ಯಕ್ರಮ ನ ನಿರ್ವಹಿಸಿದರು ಕೊನೆಯಲ್ಲಿ ರಂಜಿತ್ ಕುಮಾರ್ ವಂದಿಸಿದರು

# ರಾಯಚೂರಿಗೆ ಏಮ್ಸ್ ಸ್ಥಾಪನೆಗೆ ಆಗ್ರಹಿಸಿ ಸಿರವಾರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ

ನೀಡದೆ ಅನ್ಯಾಯ ಮಾಡಲಾಗಿದೆ. 2018ರ ವೈದ್ಯಕೀಯ ಕಾಲೇಜುಗಳ ಹಂಚಿಕೆಯಲ್ಲೂ ಜಿಲ್ಲೆಯನ್ನು ನಿರ್ಲಕ್ಷಿಸಲಾಗಿದೆ.

ಪ್ರಾದೇಶಿಕ ಅಭಿವೃದ್ಧಿ: ಸಂವಿಧಾನದ 371(ಜೆ) ವಿಧಿಯಡಿ ವಿಶೇಷ ಸ್ಥಾನಮಾನ ಹೊಂದಿರುವ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಅತ್ಯಗತ್ಯ.ಆರೋಗ್ಯ ಸೇವೆಗಳ ಕೊರತೆ: ಈ ಭಾಗದ ಜನರು ಗುಣಮಟ್ಟದ ವೈದ್ಯಕೀಯ ಸೇವೆಗಾಗಿ ನೆರೆಯ ಜಿಲ್ಲೆಗಳಿಗೆ ಅಥವಾ ಬೇರೆ ರಾಜ್ಯಗಳಿಗೆ ಅಲೆದಾಡುವುದು ತಪ್ಪಬೇಕಾದರೆ, ಸ್ಥಳೀಯವಾಗಿಯೇ ಏಮ್ಸ್ ಇರಬೇಕು.ಅನುಕೂಲಕರ ವಾತಾವರಣ: ಆರ್‌ಟಿಪಿಎಸ್ (RTPS), ವೈಟಿಪಿಎಸ್ (YTPS) ಉದ್ಯಮಗಳು, ಉತ್ತಮ ರಸ್ತೆ ಮತ್ತು ರೈಲು ಸಂಪರ್ಕ ವ್ಯವಸ್ಥೆ ಇರುವುದರಿಂದ ರಾಯಚೂರು ಏಮ್ಸ್ ಸ್ಥಾಪನೆಗೆ ಸೂಕ್ತ ಸ್ಥಳವಾಗಿದೆ.

ಸರ್ವಾಂಗೀಣ ಪ್ರಗತಿ: ಏಮ್ಸ್ ಸ್ಥಾಪನೆಯಿಂದ ಆರೋಗ್ಯದ ಜೊತೆಗೆ ಉದ್ಯೋಗ, ಶಿಕ್ಷಣ, ಸಂಶೋಧನೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ.ಪ್ರತ್ಯೇಕ ರಾಜ್ಯದ ಎಚ್ಚರಿಕೆ: ಏಮ್ಸ್ ಹೋರಾಟ ಸಮಿತಿಯ ಹಿರಿಯ ಮುಖಂಡ ಎನ್. ಉದಯಕುಮಾರ್ ಮಾತನಾಡಿ, "ಸರಕಾರ ನಮ್ಮ ಬೇಡಿಕೆಯನ್ನು ನಿರ್ಲಕ್ಷಿಸಿದರೆ, ಪ್ರತ್ಯೇಕ ರಾಜ್ಯದ ಕೂಗು ಮತ್ತಷ್ಟು ಪ್ರಬಲವಾಗಲಿದೆ" ಎಂದು ಎಚ್ಚರಿಸಿದರು. ಹೋರಾಟ ಸಮಿತಿಯ ತಾಲೂಕು ಸಂಚಾಲಕ ವೆಂಕಟರೆಡ್ಡಿ ಬಲ್ಕರ್ ಮಾತನಾಡಿ, "ಜೂನ್ 20ಕ್ಕೆ 1,500 ದಿನಗಳ ನಿರಂತರ ಹೋರಾಟ ಪೂರ್ಣಗೊಂಡಿದ್ದು, ಕಲ್ಯಾಣ ಕರ್ನಾಟಕದಾದ್ಯಂತ ಬೆಂಬಲ ಸಿಗುತ್ತಿದೆ" ಎಂದರು.

ಈ ಪ್ರತಿಭಟನೆಯಲ್ಲಿ ಮಾಜಿ ಪಟ್ಟಣ ಪಂಚಾಯತ್ ಅಧ್ಯಕ್ಷ ವೈಭೂಪನಗೌಡ, ರಮೇಶ್ ದರ್ಶನ್, ಉಮಾಶಂಕರ್ ಜೆಗರ್ಕಲ್, ಪಟ್ಟಣ ಪಂಚಾಯತ್ ಸದಸ್ಯರುಗಳಾದ ಮೌಲಾಸಾಬ್, ಚಂದ್ರಶೇಖರ್ ರೆಡ್ಡಿ, ಪ್ರಕಾಶ್ ಮಡ್ಗಿರಿ, ಶ್ರೀಧರ್ ಸ್ವಾಮಿ, ಕಲ್ಲೂರು ಬಸವರಾಜ್, ಎಂ. ಪ್ರಕಾಶಪ್ಪ, ಬಸವರಾಜ ಬಂಡಾರಿ ಸೇರಿದಂತೆ ಹಲವು ಮುಖಂಡರು, ವಿದ್ಯಾರ್ಥಿಗಳು ಮತ್ತು ಸಾವಿರಾರು ಸಾರ್ವಜನಿಕರು ಭಾಗವಹಿಸಿದ್ದರು.

## ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಒತ್ತಾಯಿಸಿ ಪ್ರಧಾನಿಗೆ ಪ್ರಸ್ತಾವನೆ ಸಲ್ಲಿಕೆ

ಸಂಧ್ಯಾರಾಜ, ಶ್ರೀನಿವಾಸ ಕುಲಕರ್ಣಿ, ಶರಣು ಮಾಲಿ, ಮಹೇಂದ್ರ ಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.ಈ ಹಿಂದೆ ನಂಜುಂಡಪ್ಪ ವರದಿಯ ಪ್ರಕಾರ ಐಐಟಿ ರಾಯಚೂರು ಜಿಲ್ಲೆಗೆ ನೀಡಬೇಕೆಂದು ಅಧಿಕೃತ ವರದಿಯಲ್ಲಿ ನಿರ್ದೇಶಿಸಿದರೂ ಸಹ ಇದಕ್ಕೆ ಕ್ಯಾರೆ ಎನ್ನದೆ ಮುಂಬಯಿ ಕರ್ನಾಟಕದ ಪ್ರಭಾವಿ ನಾಯಕರು ತಮ್ಮ ಬಲವಾದ ರಾಜಕೀಯ ಇಚ್ಛಾಶಕ್ತಿ ಬಳಿಸಿಕೊಂಡು ರಾಯಚೂರಿಗೆ ಸಿಗಬೇಕಾದ ಐಐಟಿ ಧಾರವಾಡಕ್ಕೆ ಸ್ಥಳಾಂತರ ಮಾಡಿಸಿಕೊಂಡರು. ಇದರಿಂದ ಎಚ್ಚೆತ್ತುಕೊಂಡ ಕಲ್ಯಾಣ ಕರ್ನಾಟಕದ ಹೋರಾಟಗಾರರು ಅದರಲ್ಲೂ ವಿಶೇಷವಾಗಿ ರಾಯಚೂರಿನ ಹೋರಾಟಗಾರರು ಏಳು ಜಿಲ್ಲೆಗಳ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಬೆಂಬಲದಿಂದ ರಾಯಚೂರು ಏಮ್ಸ್ ಹೋರಾಟ ಸಮಿತಿ ಮಾಡಿಕೊಂಡು ಸುಮಾರು 1500 ದಿನಗಳಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸಿಕೊಂಡು ಬರುತ್ತಿದ್ದಾರೆ.ಏಮ್ಸ್ ಆಸ್ಪತ್ರೆ ರಾಯಚೂರಿನಲ್ಲಿ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿ ಡಾ.ಶರಣ ಪ್ರಕಾಶ ಪಾಟೀಲರವರ ನೇತೃತ್ವದಲ್ಲಿ ದೆಹಲಿಗೆ ನಿಯೋಗ ಭೇಟಿ ಮಾಡಿ ಆರೋಗ್ಯ ಸಚಿವರಾದ ಮನಸುಖ ಮಾಂಡವೀಯರವರಿಗೆ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಲಾಗಿದೆ. ಈ ನಿಯೋಗದಲ್ಲಿ ರಾಯಚೂರು, ಕೊಪ್ಪಳ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕದ ಸಚಿವರು,ಸಂಸದರು ,ಶಾಸಕರು, ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕದ ಹೋರಾಟಗಾರರು ನಿಯೋಗಲ್ಲಿ ಇದ್ದರು.ಕರ್ನಾಟಕ ರಾಜ್ಯ ಸರ್ಕಾರ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸಿ ರಾಯಚೂರು ಜಿಲ್ಲೆಯಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪಿಸಲು ಕೇಂದ್ರಕ್ಕೆ ಆಗ್ರಹಿಸಿದೆ. ಅಷ್ಟೆ ಅಲ್ಲದೆ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಸಹ ಪ್ರಧಾನ ಮಂತ್ರಿಗಳಿಗೆ ಸಮಕ್ಷಮ ಭೇಟಿ ಮಾಡಿ ರಾಯಚೂರಿನಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪನೆ ಮಾಡುವ ಬಗ್ಗೆ ಮನವಿ ಸಲ್ಲಿಸಿದ್ದಾರೆ.ಭಾರತ ಮತ್ತು ಕರ್ನಾಟಕದ ಇತಿಹಾಸದಲ್ಲಿಯೆ ಒಂದು ಚಾರಿತ್ರಿಕ ಹೋರಾಟ ನಿರಂತರ ನಡೆದರೂ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ.ಕೇಂದ್ರ ಸರ್ಕಾರ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ರೈಲ್ವೆ ವಿಭಾಗ ರಚನೆ ಬಗ್ಗೆ ಆಗಲ್ಲಿ, ಬೃಹತ್ ಉದ್ದಿಮೆಗಳ ಸ್ಥಾಪನೆ ಸೇರಿದಂತೆ ನಿರಂತರವಾಗಿ ಹಿಂದುಳಿದ 371ನೇ (ಜೆ) ಕಲಂ ತಿದ್ದುಪಡಿ ಸ್ಥಾನಮಾನ ಪಡೆದಿರುವ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಲತಾಯಿ ಧೋರಣೆ ಮಾಡುತ್ತಿರುವುದಕ್ಕೆ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಬಲವಾಗಿ ಖಂಡಿಸುತ್ತದೆ. ಏಮ್ಸ್ ಆಸ್ಪತ್ರೆ ರಾಯಚೂರಿನಲ್ಲಿ ಸ್ಥಾಪನೆ ಮಾಡಲು ಹೋರಾಟ ಸಮಿತಿ ಪ್ರಧಾನ ಮಂತ್ರಿಗಳಿಗೆ ಬಲವಾಗಿ ಒತ್ತಾಯಿಸಿದೆ.

# ವಿಜೇತ ಕರಾಟೆ ಪಟುಗಳಿಗೆ ಬೆಲ್ಟ್ ಗೌರವ: ವಿದ್ಯಾರ್ಥಿನಿ ಕೀರ್ತಿಗೆ ಬ್ಲಾಕ್ ಬೆಲ್ಟ್ ಇಂದಿನ ದಿನಗಳಲ್ಲಿ ಮಕ್ಕಳಿಗೆ ಕರಾಟೆ ಕೇವಲ ಒಂದು ಕಲೆಯಲ್ಲ ಅದು ಆತ್ಮರಕ್ಷಣೆಗಾಗಿ ಪ್ರತಿಯೊಬ್ಬರೂ ಕಲಿಯಬೇಕಾದ ಅತ್ಯಗತ್ಯ ವಿದ್ಯೆಯಾಗಿದೆ – ಮಾಜಿ ಸೈನಿಕ ಸಲೀಂ

ಧೈರ್ಯದ ದಾರಿ

**ರಾಯಚೂರು: ಜೂನ್:22:** ಇಂದಿನ ದಿನಗಳಲ್ಲಿ ಮಕ್ಕಳಿಗೆ ಕರಾಟೆ ಕೇವಲ ಒಂದು ಕಲೆಯಲ್ಲ ಅದು ಆತ್ಮರಕ್ಷಣೆಗಾಗಿ ಪ್ರತಿಯೊಬ್ಬರೂ ಕಲಿಯಬೇಕಾದ ಅತ್ಯಗತ್ಯ ವಿದ್ಯೆಯಾಗಿದೆ ಕರಾಟೆಯಿಂದ ಮಕ್ಕಳಲ್ಲಿ ದೈಹಿಕ ಸಾಮರ್ಥ್ಯದ ಜೊತೆಗೆ ಮಾನಸಿಕ ಏಕಾಗ್ರತೆ ಹಾಗೂ ಕಠಿಣ ಶಿಸ್ತು ಮೂಡುತ್ತದೆ ಎಂದು ಮಾಜಿ ಸೈನಿಕ ಮಹಮ್ಮದ್ ಸಲೀಂ ತಿಳಿಸಿದರು.ಅವರಿಂದು ದೇವಸೂಗೂರಿನ ಶ್ರೀ ಸೂಗುರೇಶ್ವರ ಕರಾಟೆ ಸಂಸ್ಥೆ ವಿದ್ಯಾರ್ಥಿಗಳ ಕೌಶಲ್ಯ ಮತ್ತು ಪ್ರಗತಿಯನ್ನು ಗುರುತಿಸುವ ಪ್ರಮುಖ 'ಬೆಲ್ಟ್ ಪರೀಕ್ಷೆಯ ಫಲಿತಾಂಶ ಹಾಗೂ ವಿವಿಧ ಬಣ್ಣಗಳ ಬೆಲ್ಟ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ವಿದ್ಯಾರ್ಥಿಗಳು ಕಳೆದ ಹಲವು ತಿಂಗಳುಗಳಿಂದ ಪಟ್ಟ ಶ್ರಮ ಮತ್ತು ನಿಯಮಿತ ಅಭ್ಯಾಸದ ಫಲವಾಗಿ ಇಂದು ಮುಂದಿನ ಹಂತದ ಬೆಲ್ಟ್‌ಗಳನ್ನು ಪಡೆದುಕೊಂಡಿದ್ದಾರೆ ಬಿಳಿ ಬೆಲ್ಟ್‌ನಿಂದ ಆರಂಭಿಸಿ ಅತ್ಯುನ್ನತ ಕಪ್ಪು ಬೆಲ್ಟ್ (ಃಟಚಿಛಿಇ ಃಜಟಣ) ಧರಿಸುವವರೆಗೂ ವಿದ್ಯಾರ್ಥಿಗಳು ಇದೇ ರೀತಿಯ ಶಿಸ್ತು ಮತ್ತು ಬದ್ಧತೆಯನ್ನು ಕಾಪಾಡಿಕೊಳ್ಳಬೇಕು," ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕರಾಟೆ ಪಟು ರಾಜೇಶ್ ಮಾತನಾಡಿ ಇಂದಿನ ದಿನಗಳಲ್ಲಿ ಮಕ್ಕಳಿಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಕರಾಟೆ ಅತ್ಯಗತ್ಯವಾದ ಆತ್ಮರಕ್ಷಣಾ ಕಲೆಯಾಗಿದೆ ಇದು ಕೇವಲ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲದೆ ಮಕ್ಕಳಲ್ಲಿ ಕಠಿಣ ಶಿಸ್ತು, ಧೈರ್ಯ ಮತ್ತು ಮಾನಸಿಕ ಏಕಾಗ್ರತೆಯನ್ನು ಬೆಳೆಸುತ್ತದೆ ಎಂದು ತಿಳಿಸಿದರು.ಶ್ರೀ ಸುಗುರೇಶ್ವರ ಕರಾಟೆ ಸಂಸ್ಥೆ ತರಬೇತಿ ಕೇಂದ್ರದ ಮುಖ್ಯ ಕರಾಟೆ ಶಿಕ್ಷಕರಾದ ಸೂಗಪ್ಪ ಮಾತನಾಡಿ ವಿದ್ಯಾರ್ಥಿಗಳು ನಿರಂತರ ಅಭ್ಯಾಸ




ಮತ್ತು ಬದ್ಧತೆಯಿಂದ ಮುಂದಿನ ಹಂತದ ಬೆಲ್ಟ್‌ಗಳನ್ನು ಮುಡಿಗೇರಿಸಿಕೊಂಡಿದ್ದಾರೆ ಇದೇ ಶಿಸ್ತನ್ನು ಕಾಯ್ದುಕೊಂಡು ಉನ್ನತ ಕಪ್ಪು ಬೆಲ್ಟ್ (Black Belt) ಪಡೆಯುವತ್ತ ಸಾಗಬೇಕು ಅದೇ ರೀತಿ

ದೇವಸುಗರಿನ ದಿವಗಂತ ವಿಶ್ವನಾಥ ಗದ್ದಿಮಠ ಅವರ ಸ್ಮರಣಾರ್ಥವಾಗಿ ಅವರ ಸುಪುತ್ರ ನವೀನ, ಶೋಭಾ

ಗದ್ದಿಮಠ ನೆರೆದ ಎಲ್ಲಾ ಅತಿಥಿಗಳಿಗೆ ಸ್ಮರಣ ಸಂಚಿಕೆ ನೀಡಿ ಗೌರವಿಸಿದ್ದು ನಮ್ಮ ವಿದ್ಯಾರ್ಥಿನಿ ಕೀರ್ತಿ ಬ್ಲಾಕ್ ಬೆಲ್ಟ್ ತೆಗೆದುಕೊಂಡಿರುವುದು ತುಂಬಾ ಸಂತೋಷದಾಯಕ ವಿಷಯ ಎಂದರು. ನಂತರ ಕರಾಟೆ ತರಬೇತಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಅವರವರ ಹಂತಗಳಿಗೆ ಅನುಗುಣವಾಗಿ ಬಿಳಿ, ಹಳದಿ, ಹಸಿರು, ನೀಲಿ ಹಾಗೂ ಕಂದು ಬಣ್ಣದ ಬೆಲ್ಟ್‌ಗಳು ಮತ್ತು ಪ್ರಮಾಣಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ಈ ಸಮಾರಂಭದಲ್ಲಿ ಅತಿಥಿಗಳಾಗಿ ಡಾ, ಅಭಿಷೇಕ, ಗ್ರಾಮ ಪಂಚಾಯಿತಿ ಆನಂದ್ ಕುಮಾರ ಸೇರಿದಂತೆ ತರಬೇತಿ ಕೇಂದ್ರದ ತರಬೇತುದಾರರು, ಪೋಷಕರು ಹಾಗೂ ಕರಾಟೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಯೋಗ ಮಾಡಿ ನಿರೋಗಿಯಾಗಿ – ಎಚ್.ಬಿ.ಎಂ.








ಧೈರ್ಯದ ದಾರಿ

**ಮಾನ್ವಿ:** "ಯೋಗವು ಕೇವಲ ವ್ಯಾಯಾಮವಲ್ಲ; ಅದು ಉತ್ತಮ ಆರೋಗ್ಯ, ಶಾಂತ ಮನಸ್ಸು ಮತ್ತು ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಜೀವನ ಪದ್ಧತಿಯಾಗಿದೆ. ವಿದ್ಯಾರ್ಥಿಗಳು ಪ್ರತಿದಿನ ಕನಿಷ್ಠ 20 ರಿಂದ 30 ನಿಮಿಷ ಯೋಗಾಭ್ಯಾಸ ಮಾಡಿದರೆ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಜೀವನದಲ್ಲಿ ಯಶಸ್ಸು ಸಾಧಿಸಬಹುದು. "ಆರೋಗ್ಯವೇ ಭಾಗ್ಯ" ಎಂಬ ಮಾತಿನಂತೆ, ಯೋಗವು ಆರೋಗ್ಯಕರ ಮತ್ತು ಸಂತೋಷದ ಬದುಕಿಗೆ ದಾರಿ ತೋರಿಸುತ್ತದೆ" ಉದ್ಘಾಟಿಸಿದ ಮಾಜಿ ಪುರಸಭೆ ಸದಸ್ಯ ಎಚ್.ಬಿ.ಎಂ. ಭಾಷ ಹೇಳಿದರು.

ಮೇರಾ ಯುವ ಭಾರತ ಕೇಂದ್ರ ರಾಯಚೂರು, ಭಾರತ ಸೇವಾದಳ, ರೆಡ್ ಕ್ರಾಸ್, ವಂದೇ ಮಾತರಂ ಯುವ ಸಂಘ ಮದ್ಲಾಪುರ, ಬಡವರ ಬಂಧು ಯುವಕ ಸಂಘ ಮಾನ್ವಿ ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸರ್ಕಾರಿ ಪ್ರೌಢ ಶಾಲೆ ಕೋನಾಪೂರ ಪೇಟ್ ಶಾಲೆ ಅವರಣದಲ್ಲಿ ಆಚರಿಸಿ ಪ್ರಶಸ್ತಿಪತ್ರ ವಿತರಸಲಾಯಿತು.

ಮುಖ್ಯ ಅತಿಥಿಯಾಗಿ ಮಾತನಾಡಿದ ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪುರ "ಇವತ್ತಿನ ಬದುಕು ಒತ್ತಡಮಯ ಮತ್ತು ರೋಗಗಳೊಂದಿಗೆ ಬದುಕುವ ಜೀವನ ಅತ್ಯುತ್ತಮ ಜೀವನ ಶೈಲಿ ಅರ್ಥಪೂರ್ಣ ಮಾದರಿಯ ಇರಲು ಬಯಸಿದರೆ ಯೋಗ ರೂಡಿಸಿಕೊಳ್ಳಿ. ಮಕ್ಕಳಿಗೆ ಏಕಾಗ್ರತೆ ವೃದ್ಧಿಸಿಕೊಳ್ಳಲು ಯೋಗಾಭ್ಯಾಸ ಅಗತ್ಯ ಮೊಬೈಲ್ ಮತ್ತು ಟಿವಿ ರಿಮೋಟ್ ಗಳಿಂದ ಮುಕ್ತತೆ ಪಡೆದು ಸಾಧನೆಯ ಹಾದಿಯತ್ತಾ ಸಾಗಲು ನಾವು ದಿನನಿತ್ಯ ದ್ಯಾನ ಮಾಡುವುದು ಉತ್ತಮ" ಎಂದು ಹೇಳಿದರು.

ಅಧ್ಯಕ್ಷತೆಯಲ್ಲಿ ಮುಖ್ಯಗುರು ವಿರುಪಾಕ್ಷಪ್ಪ ಮಾತನಾಡುತ್ತಾ "ನಮ್ಮ ದೇಶದ ಅತ್ಯುನ್ನತ ಸಾಧನೆಗಳಲ್ಲಿ ಒಂದು ಪ್ರಪಂಚಕ್ಕೆ ನನ್ನ ದೇಶ ಯೋಗ ಪರಿಚಯಿಸಿದೆ ನಾವು ನೀವುಗಳು ಜಿಮ್ ಮತ್ತು ಇನ್ನಿತರೆಗಳಲ್ಲಿ ಭಾಗಿಯಾಗುವುದಕ್ಕಿಂತ ವ್ಯಾಯಮ ದ್ಯಾನ ಯೋಗ ಮಾಡೋಣ ದೇಹದಲ್ಲಿನ ಮನಸ್ಸು ಆತ್ಮ ಶುದ್ದವಾಗಿಟ್ಟುಕೊಳ್ಳೋಣ.

ಸಂಧರ್ಭದಲ್ಲಿ ವೇದಿಕೆಯಲ್ಲಿ ಯೋಗಗುರು ಮೌನೇಶ ಪೋತ್ನಾಳ್, ಶಿಕ್ಷಕ ಸಂಜೀವಪ್ಪ ಚಲವಾದಿ, ವಿಜಯ, ಮಹೆಬೂಬ್ ಯಾದಗಿರಿ, ರಘುನಂದನ್, ರಾಮಸ್ವಾಮಿ, ಬಡವರ ಬಂಧು ಸಂಘದ ಅಧ್ಯಕ್ಷ ದೇವಣ್ಣ ಭಜಂತ್ರಿ, ಗ್ರಂಥಪಾಲಕ ರಮೇಶ ಪೂಜಾರಿ, ಪ್ರಗತಿಪರ ರೈತ ರೆಡ್ಡಿ ಮತ್ತು ಶಿಬಿರಾರ್ಥಿಗಳಿದ್ದರು.

# ದಲಿತ ಮುಖಂಡ ರಾಜು ಬೊಮ್ಮನಾಳ ಮೇಲೆ ಹಲ್ಲೆ, ಕಿಡ್ನಾಪ್ ಯತ್ನ: ಆರೋಪಿಗಳ ಬಂಧನಕ್ಕೆ ದಸಂಸ ಆಗ್ರಹ



ಧೈರ್ಯದ ದಾರಿ

**ಸಿರವಾರ:** ರಾಯಚೂರು ಕೇಂದ್ರ ಬಸ್ ನಿಲ್ದಾಣದಲ್ಲಿ ದಲಿತ ಸಂಘರ್ಷ ಸಮಿತಿಯ (ಎನ್. ಮೂರ್ತಿ ಬಣ) ಜಿಲ್ಲಾ ಮುಖಂಡ ರಾಜು ಬೊಮ್ಮನಾಳ ಅವರ ಮೇಲೆ ನಡೆದ ಹಲ್ಲೆ, ಅಪಹರಣ ಯತ್ನ ಹಾಗೂ ಮಾನಹಾನಿ ಪ್ರಕರಣದ ವಿರುದ್ಧ ದಸಂಸ ತಾಲೂಕು ಘಟಕದ ಪದಾಧಿಕಾರಿಗಳು ಸಿರವಾರ ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕೂಡಲೇ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.

**ಘಟನೆಯ ಹಿನ್ನೆಲೆ:** ಮೇ 21 ರಂದು ರಾಯಚೂರು ಬಸ್ ನಿಲ್ದಾಣದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿರುವ ನಿರ್ಮಲಮ್ಮ ಎಂಬಾಕೆ, ರಾಜು ಬೊಮ್ಮನಾಳ ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಕಟ್ಟಿಗೆಯಿಂದ ಹಲ್ಲೆ ನಡೆಸಿದ್ದಾಳೆ. ಆಕೆ ಈ ಕೃತ್ಯದ ವೇಳೆ ಪಾನಮತ್ತಳಾಗಿದ್ದಳು ಎಂದು ತಿಳಿದುಬಂದಿದೆ. ಆದರೆ, ಇದು ಆಕೆಯಿಂದಷ್ಟೇ ನಡೆದ ಕೃತ್ಯವಲ್ಲ, ಬದಲಾಗಿ ರಾಜು ಬೊಮ್ಮನಾಳ ಅವರ ಸಾಮಾಜಿಕ ಚಟುವಟಿಕೆಗಳನ್ನು ಸಹಿಸದ ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿದ ಪೂರ್ವ ನಿಯೋಜಿತ ಸಂಚು ಎಂದು ಸಂಘಟನೆ ಆರೋಪಿಸಿದೆ.

**ಸಂಘಟನೆಯ ಪ್ರಮುಖ ಆಕ್ಷೇಪಗಳು:** ವ್ಯವಸ್ಥಿತ ಸಂಚು: ರಾಜು ಬೊಮ್ಮನಾಳ ಅವರನ್ನು ಸಾರ್ವಜನಿಕವಾಗಿ ಅವಮಾನಿಸುವ ಉದ್ದೇಶದಿಂದ, ಮಹಿಳೆಯನ್ನು ದಾಳವಾಗಿ ಬಳಸಿಕೊಂಡು ಹಲ್ಲೆ ನಡೆಸಲಾಗಿದೆ. ಘಟನೆಯನ್ನು ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡುವ ಮೂಲಕ ಅವರ ಘನತೆಗೆ ಧಕ್ಕೆ ತರಲಾಗಿದೆ.

**ಹತ್ಯೆಗೆ ಸಂಚಿನ ಶಂಕೆ:** ದಲಿತ ದೌರ್ಜನ್ಯಗಳ ವಿರುದ್ಧ ನಿರಂತರವಾಗಿ ಧ್ವನಿ ಎತ್ತುವ ರಾಜು ಬೊಮ್ಮನಾಳ ಅವರನ್ನು ಈ ಹಿಂದೆಯೂ ಅಪಹರಣ ಮಾಡಲು ಯತ್ನಿಸಲಾಗಿತ್ತು. ಇದೀಗ ದೈಹಿಕ ಹಲ್ಲೆಯ ಜೊತೆಗೆ ಹತ್ಯೆಗೆ ಸಂಚು ನಡೆದಿರುವ ಸಾಧ್ಯತೆಯನ್ನು ದಸಂಸ ಮುಖಂಡರು ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳ ವರದಿ ಕುರಿತು ಅಸಮಾಧಾನ: ಘಟನೆಯನ್ನು ಏಕಪಕ್ಷೀಯವಾಗಿ ಬಿಂಬಿಸಿ, ಅವರನ್ನು 'ಕಾಮುಕ' ಎಂದು ಬಿಂಬಿಸುವ ರೀತಿಯಲ್ಲಿ ವರದಿ ಮಾಡಿದ ಮಾಧ್ಯಮಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಂಘಟನೆ ಒತ್ತಾಯಿಸಿದೆ.

**ಸಂಘಟನೆಯ ಬೇಡಿಕೆಗಳು:** ಹಲ್ಲೆ ಪ್ರಕರಣದಲ್ಲಿ ಭಾಗಿಯಾದ ಪ್ರತ್ಯಕ್ಷ ಹಾಗೂ ಪರೋಕ್ಷ ಆರೋಪಿಗಳನ್ನು ತಕ್ಷಣ ಬಂಧಿಸಬೇಕು. ಬಸ್ ನಿಲ್ದಾಣದ ರಾಘವೇಂದ್ರ ಕ್ಯಾಂಟೀನ್ ಮಾಲೀಕರ ಪಾತ್ರದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು.

ರಾಜು ಬೊಮ್ಮನಾಳ ಮತ್ತು ಅವರ ಕುಟುಂಬಕ್ಕೆ ಸೂಕ್ತ ಪೊಲೀಸ್ ರಕ್ಷಣೆ ಕಲ್ಪಿಸಬೇಕು. ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ನಡೆದ ಈ ಕೃತ್ಯದ ಹಿಂದಿನ ಕಾಣದ ಕೈಗಳನ್ನು ಬಯಲಿಗೆಳೆಯಬೇಕು. ಈ ಸಂದರ್ಭದಲ್ಲಿ ಎಂ. ಮನೋಹರ, ದುರುಗಪ್ಪ ಕಲಂಗೇರಾ, ಹುಸೇನಪ್ಪ ಗೋಲದಿನ್ನಿ, ಯಾಕೋಬ್ ಕವಿತಾಳ, ಹನುಮಂತ ಗಣದಿನ್ನಿ, ಶ್ರೀನಿವಾಸ ಹೋಕ್ರಾಣಿ, ರವಿ ಗಣದಿನ್ನಿ, ಶಿವಣ್ಣ ಗಣದಿನ್ನಿ ಸೇರಿದಂತೆ ದಸಂಸದ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

# ಇಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

**ರಾಯಚೂರು ಜೂನ್ 22 :** ರಾಯಚೂರು ಜಿಲ್ಲಾಡಳಿತದ ವತಿಯಿಂದ ಜೂನ್ 27ರಂದು ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಜುಲೈ 2ರಂದು ಡಾ.ಫ.ಗು.ಹಳಕಟ್ಟಿಯವರ ಜನ್ಮ ದಿನದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಆಚರಿಸಲಾಗುತ್ತದೆ. ಈ ಜಯಂತಿಗಳ ಅಂಗವಾಗಿ ಜೂನ್ 23ರ ಬೆಳಿಗ್ಗೆ 11ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ವಿವಿಧ ಸಮಾಜದ ಮುಖಂಡರು, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## "ಭವರಿ" ಕಥಾಗುಚ್ಛ ಸ್ತ್ರೀ ಸಂವೇದನೆ ಪ್ರತೀಕ: ಡಾ.ಕಾವ್ಯಶ್ರೀ ಮಹಾಗಾಂವಕರ್



**ಕಲಬುರಗಿ,ಜೂ.22**–ಸಣ್ಣ ಕಥೆಗಳು ಕಾಲಮಾನದ ಪ್ರತಿಬಿಂಬಗಳಾಗಿವೆ, ಬಿ.ಜೆ.ಪಾರ್ವತಿ ಸೋನಾರೆಯವರ ಕೃತಿ 'ಭವರಿ' ಕಥಾಸಂಕಲನವು ಇದಕ್ಕೆ ಹೊರತಾಗಿಲ್ಲ ಎಂದು ಹಿರಿಯ ಲೇಖಕಿ ಡಾ.ಕಾವ್ಯಶ್ರೀ ಮಹಾಗಾಂವಕರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾಜದಲ್ಲಿ ನಡೆದಿರುವ ಸ್ತ್ರೀ ಶೋಷಣೆ, ಅನ್ಯಾಯ, ಅತ್ಯಾಚಾರದ ಘಟನೆಗಳನ್ನು ಲೇಖಕಿ ಪಾತ್ರ, ವಸ್ತು, ಸಂಭಾಷಣೆ, ಸ್ಥಳೀಯ ಭಾಷೆ ಮುಖೇನ ವಿಶಿಷ್ಟ ನಿರೂಪಣ ಶೈಲಿಯಲ್ಲಿ ಹೆಣದಿದ್ದಾರೆ, ಬೀದರ ಮತ್ತು ವಿಜಯಪುರದ ಭಾಷೆಯನ್ನು ಬಳಸಿ ಕಥೆಗಳ ಮೆರಗು ಹೆಚ್ಚಿಸಿದ್ದಾರೆ. ಒಬ್ಬ ಒಳ್ಳೆಯ ಕಥೆಗಾರ್ತಿಗೆ ಇರಬೇಕಾದ ಕಲಾ ಕೌಶಲ್ಯ, ಪ್ರತಿಭೆ ಎದ್ದು ಕಾಣುತ್ತಿದೆ. ಈ ಕಥಾ ಸಂಕಲನದಲ್ಲಿರುವ ಐದು ಕಥೆಗಳು ಸ್ತ್ರೀಸಂವೇದನೆಯಿಂದ ಕೂಡಿವೆ ಎಂದರು.

ಕಲಬುರ್ಗಿಯ ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘವು ಈ ಕಾರ್ಯಕ್ರಮದ ಆಯೋಜನೆ ಮಾಡಿತ್ತು. ಸಂಘದ ಅಧ್ಯಕ್ಷರಾದ ಅಪ್ಪಾರಾವ ಅಕ್ಕೋಣೆಯವರು ಅಧ್ಯಕ್ಷತೆ ವಹಿಸಿದ್ದರು. ಡಾ.ಶ್ರೀಶೈಲ ನಾಗರಾಳ ಮತ್ತು ಡಾ.ಸಂಗನಗೌಡ ಹಿರೇಗೌಡ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಡಾ.ವಿಜಯಕುಮಾರ ಪರುತೆ ಕಾರ್ಯಕ್ರಮದ ಸಂಚಾಲನೆಗೈದರು. ಬಿ.ಎಚ್.ನಿರಗುಡಿ, ಡಾ.ಗವಿಸಿದ್ಧಪ್ಪ ಪಾಟೀಲ್, ಡಾ.ಶಿವಶರಣಪ್ಪ ದಾಬಾ,ಡಾ.ಶೀಲಾದೇವಿ ಬಿರಾದಾರ,ನೀಲಮ್ಮ ನೆಲೋಗಿ,ಡಾ.ಜಯದೇವಿ ಗಾಯಕವಾಡ,ಡಾ.ಸಿದ್ಧಪ್ಪ ಹೊಸಮನಿ,ಎಸ್.ಎಸ್.ಪಾಟೀಲ್,ರೇವಣಸಿದ್ಧಪ್ಪ ದುಕಾನ,ಡಾ.ಪೀರಪ್ಪ ಸಜ್ಜನ,ವಿಶ್ವನಾಥ ಭಕರೆ,ಸಿ.ಎಸ್.ಮಾಲಿಪಾಟೀಲ್,ಭೀಮಶೆಟ್ಟಿ ಮುಕ್ಕಾ,ಶಿವಾನಂದ ಮಠಪತಿ,ಎಸ್.ಎಸ್.ಹೂಗಾರ,ರಾಜೇಂದ್ರ ಝಳಕಿ ಮತ್ತು ಸಿದ್ಧರಾಮ ಸರಸಂಬಿ ಉಪಸ್ಥಿತರಿದ್ದರು.

# ಪಲ್ಸ್ ಪೋಲಿಯೋ ಜವಾಬ್ದಾರಿ ಅಚ್ಚುಕಟ್ಟಾಗಿ ನಿಭಾಯಿಸಿ: ಜಿಲ್ಲಾಧಿಕಾರಿ ಪೂವಿತಾ



ಧೈರ್ಯದ ದಾರಿ

**ರಾಯಚೂರು ಜೂನ್ 22:** ಜಿಲ್ಲೆಯಲ್ಲಿ ಜೂನ್ 28 ರಂದು ಜರುಗುವ ಹುಟ್ಟಿನಿಂದ 05 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕಲಾಗುವ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ವಿವಿಧ ಇಲಾಖೆಗಳಿಗೆ ನೀಡಿರುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ ಅಭಿಯಾನದ ಯಶಸ್ವಿಗೆ ಶ್ರಮಿಸಬೇಕೆಂದು ಜಿಲ್ಲಾಧಿಕಾರಿಗಳು ಪೂವಿತಾ ಎಸ್. ಅವರು ಹೇಳಿದರು.

ಜೂನ್ 22ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ರಾಯಚೂರು, ಸಿಂಧನೂರು, ನಗರ ಹಾಗೂ ಮಾನವಿ, ಲಿಂಗಸೂಗೂರು, ದೇವದುರ್ಗ ಪಟ್ಟಣಗಳಲ್ಲಿ ವಿವಿಧ ಸ್ಥಳಗಳಲ್ಲಿ ಅನುಷ್ಠಾನ ಮಾಡುವ ಪೋಲಿಯೋ ಬೂತ್‌ಗಳ ಮಾಹಿತಿ ಪಡೆದು, ಈಗಾಗಲೆ ಜಿಲ್ಲೆಯಲ್ಲಿ ಒಟ್ಟು 2,60,002 ಮಕ್ಕಳನ್ನು ಗುರುತಿಸಲಾಗಿದ್ದು, ಮಕ್ಕಳಿಗೆ ಲಸಿಕೆ ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,132 ಬೂತ್‌ಗಳು ಹಾಗೂ ಸಂತೆ, ಜಾತ್ರೆ, ಮಾರುಕಟ್ಟೆ, ರೈಲು ನಿಲ್ದಾಣ, ಬಸ್ ನಿಲ್ದಾಣ, ಜನ ವಸತಿ ಪ್ರದೇಶ ಸೇರಿದಂತೆ ಮುಂತಾದವುಗಳಲ್ಲಿ ಲಸಿಕೆ ಹಾಕಲು 53 ಟ್ರಾನ್ಸಿಟ್ ಬೂತ್‌ಗಳು ಹಾಗೂ ವಲಸೆ ಪ್ರದೇಶ, ಕಟ್ಟಡ ಕಾಮಗಾರಿ, ಇಟ್ಟಿಗೆ ಬಟ್ಟಿ, ಕಬ್ಬು ಕಡೆಯುವ ಜಾಗೆ, ಕುರಿಹಟ್ಟಿ, ಕೊಳಚೆ ಪ್ರದೇಶ, ತೋಟದ ಮನೆ, ಮುಂತಾದ ಸ್ಥಳಗಳಲ್ಲಿರುವ ಮಕ್ಕಳಿಗೆ ಲಸಿಕೆ ಹಾಕಲು 33 ಸಂಚಾರಿ ತಂಡ ಹಾಗೂ 248 ಮೇಲ್ವಿಚಾರಕರನ್ನು ನೇಮಿಸಲಾಗಿದ್ದು ನಗರದ ಪ್ರದೇಶದ ಜನತೆಯು ತಮ್ಮ ಮೊಬೈಲ್‌ಗಳ ಸಹಾಯದಿಂದ ಪೂರ್ವದಲ್ಲಿಯೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಲು ಎಲ್ಲ ಗ್ರೂಪ್‌ಗಳಿಗೆ ಶೇರ್ ಮಾಡಲು ತಿಳಿಸಿ ನಿಗದಿತ ಗುರಿ ಸಾಧಿಸಲು ಸೂಚಿಸಿದರು.

ಪಲ್ಸ್ ಪೋಲಿಯೋ ಕಾರ್ಯದಲ್ಲಿ ಸಾಲು ರಜೆಗಳ ಹಿನ್ನಲೆ ಮುಂಚಿತವಾಗಿ ಬೂತ್‌ಗಳನ್ನು ಹೊಂದಿದ ಶಾಲೆ, ಅಂಗನವಾಡಿ ಕೇಂದ್ರಗಳನ್ನು ಸ್ವಚ್ಚಗೊಳಿಸಿ ಅಗತ್ಯ ಕುಡಿಯುವ ನೀರಿನ ವ್ಯವಸ್ಥೆ, ಪಾಲಕರಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಕಲ್ಪಿಸಲು ಯಾವುದೆ ನ್ಯೂನ್ಯತೆಯಿಲ್ಲದೆ ಸಿದ್ದಪಡಿಸಲು ಸೂಚಿಸಿದರು.

ಜೂನ್ 23, 24 ಹಾಗೂ 25ರ ಮೂರು ದಿನಗಳ ಕಾಲ ಪ್ರೀ ಕ್ಟಿವಿಟಿ ಮೂಲಕ ಅಂಗನವಾಡಿ, ಖಾಸಗಿ ಮೊಂಟೇಸ್ರಿಗಳಲ್ಲಿ ಎಲ್ಲ 05 ವರ್ಷದ ಮಕ್ಕಳಿಗೆ ಲಸಿಕೆ ಲಸಿಕೆ ಹಾಕಲು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಪೂರ್ವ ನಿಗದಿಯಂತೆ ಎಲ್ಲ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಸಂರಕ್ಷಿಸಲು ಸತತವಾಗಿ ವಿದ್ಯುತ್ ಪೂರೈಕೆ, ಲಸಿಕೆ ಸಾಗಿಸಲು ವಾಹನಗಳ ಒದಗಿಸುವಿಕೆ, ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್ ಹಾಕಲು ಎಲ್ಲ ಸ್ಥಳಿಯ ಸಂಸ್ಥೆಯವರಿಗೆ. ಎರಡು ದಿನಗಳ ಕಾಲ ಸ್ಥಳೀಯ ಹಂತದಲ್ಲಿ ಜಾಥಾ ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆಯವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲೆಯಾದ್ಯಂತ ಈಗಿನಿಂದಲೇ ಮನೆ ಭೇಟಿಯ ಮೂಲಕ ಪಾಲಕರಿಗೆ ಮಾಹಿತಿ ನೀಡಬೇಕು. ಪತ್ರಿಕೆಗಳಲ್ಲಿ ಪ್ರಚಾರ, ಮೈಕಿಂಗ್, ಟಾಂ ಟಾಂ, ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪೋಸ್ಟರ್ ಬಿಡುಗಡೆ: ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅಂಗವಾಗಿ ಪಲ್ಸ್ ಪೋಲಿಯೋ ಪ್ರಚಾರದ ಪೋಸ್ಟರ್ ಹಾಗೂ ಲಸಿಕಾ ಕೇಂದ್ರದ ಕ್ಯೂ ಆರ್ ಕೋಡ್‌ನ್ನು ವಿವಿಧ ಗಣ್ಯರಿಂದ ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ರಾಯಚೂರು ನಗರಾಭಿವೃದ್ಧಿ ಯೋಜನಾ ನಿರ್ದೇಶಕ ತಿಮ್ಮಪ್ಪ ಬಿರಾದರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು, ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಧಿಕಾರಿ ಡಾ.ನಂದಿತಾ ಎಮ್. ಎನ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ಆರತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಶಿವಮಾನ್ಯಪ್ಪ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಕೆಪಿ ವಿದ್ಯಾ ಸಂಸ್ಥೆಯಲ್ಲಿ ಯೋಗ ಮತ್ತು ಸಸಿ ನೆಡುವ ಕಾರ್ಯಕ್ರಮ



**ಬೀದರ: ಜೂ.22:**ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಮತ್ತು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಬಾಬು ವಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಯೋಗ ಶಿಕ್ಷಕಿಯಾದ ರೇಖಾ ಚೌಧರಿ ತಮ್ಮ ತಂಡದ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಯೋಗದ ವಿವಿಧ ಆಸನೆಗಳು ಮತ್ತು ಯೋಗದ ಮಹತ್ವ ತಿಳಿಸಿಕೊಟ್ಟರು.

ಸಂಸ್ಥೆಯ ಅಧ್ಯಕ್ಷರಾದ ಬಾಬು ವಾಲಿ ಮಾತನಾಡಿ, ವಿದೇಶಿಯರು ಹೇಗೆ ಜಗತ್ತಿಗೆ ವಿವಿಧ ದಿನಾಚರಣೆ ತಿಳಿಸಿಕೊಟ್ಟರು, ಅದೇ ರೀತಿ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಜಗತ್ತಿಗೆ ಯೋಗ ದಿನಾಚರಣೆ ನೀಡಿದರು.

ಯೋಗವು ದಿನಾಚರಣೆಗೆ ಸೀಮಿತ ಮಾಡದೇ ಪ್ರತಿ ನಿತ್ಯ ಕನಿಷ್ಠ 30 ನಿಮಿಷಗಳಾದರೂ, ಯೋಗಕ್ಕಾಗಿ ಸೀಮಿತವಿಡಬೇಕೆಂದರು.

ಇದೇ ಸಂಧರ್ಭದಲ್ಲಿ ಯೋಗ ಶಿಕ್ಷಕಿ ರೇಖಾ ಚೌಧರಿ ಮತ್ತು ಅವರ ತಂಡಕ್ಕೆ ಸನ್ಮಾನಿಸಿ ಸಸಿ ವಿತರಿಸಿದರು. ಇದೇ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಬಾಬು ವಾಲಿ ಸಂಸ್ಥೆಯ ಆವರಣದಲ್ಲಿ ಸಸಿ ನೆಟ್ಟು, ವಿದ್ಯಾರ್ಥಿಗಳಿಗೆ ಸಸಿ ವಿತರಿಸಿ ಸೂಕ್ತ ಸ್ಥಳಗಳಲ್ಲಿ ನೆಟ್ಟು ಅವುಗಳ ಪಾಲನೆ ಪೋಷಣೆ ಮಾಡುವಂತೆ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಈ ಸಂಧರ್ಭದಲ್ಲಿ ಶಿಕ್ಷಣ ಸಂಸ್ಥೆಯ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಡಾ .ಬಿರಾದಾರ ಸಿದ್ದಪಡಿಸಿದ ಯೋಗದ ನುಡಿಮುತ್ತುಗಳ ನಾಮಫಲಕ ಗಣ್ಯರಿಂದ ಅನಾವರಣ.




ಧೈರ್ಯದ ದಾರಿ

ಅಂತರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ರಾಯಚೂರಿನ ಮಹಾತ್ಮ ಗಾಂಧಿ ಸ್ಟೇಡಿಯಂನಲ್ಲಿ ನಡೆದ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ್ ರಚನೆ ಮಾಡಿ ಸಿದ್ದಪಡಿಸಿದ ಯೋಗದ ಮಹತ್ವದ ನುಡಿಮುತ್ತುಗಳ ನಾಮಫಲವನ್ನು ಗಣ್ಯರು ಅನಾವರಣ ಮಾಡಿ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಾಹಿತಿ ಆಯೋಗದ ಕಲ್ಬುರ್ಗಿ ವಿಭಾಗದ ಆಯುಕ್ತರಾದ ಶ್ರೀ ಬಿ ವೆಂಕಟ ಸಿಂಗ್. ಜಿಲ್ಲಾ ಪೊಲೀಸ್ ಅಧೀಕ್ಷಕ ರಾದ ಅರುಣೋಂಶಗಿರಿ ಹೆಚ್ಚುವರಿ ಜಿಲ್ಲಾಧಿಕಾರಿಗಳಾ ಡಾ ಹಂಪಣ್ಣ ಸಜ್ಜನ್ ಮಹ ನಗರಪಾಲಿಕೆಯ ಆಡಳಿತ ಅಧಿಕಾರಿ ಶ್ರೀಮತಿ ಸಂತೋಷ ರಾಣಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಿ ಮಲ್ಲಿಕಾರ್ಜುನ್ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ ಶಂಕರ್ ಗೌಡ ಯುವಜನ ಸೇವಾ ಕ್ರೀಡಾ ಇಲಾಖೆಯ ಈರೇಶ್ ನಾಯಕ್ .ಮಹಾನಗರ ಪಾಲಿಕೆಯ ಸಮಿತಿಯ ಅಧಿಕಾರಿಗಳಾದ ಕೃಷ್ಣಶಾವಂತಿಗೇರಿ . ಜಿಲ್ಲಾ ಶಾಸ್ತ್ರದ ಡಾ ರವಿಶಂಕರ್ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ರಾಜಯೋಗಿನಿ ಬಿಕೆ ಸ್ಮಿತಾ ಅಕ್ಕ. ಸಮಾಜ ಕಲ್ಯಾಣ ಇಲಾಖೆಯ ಅನಿತಾ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಡಾ ಈರಣ್ಣ ಕೋಸಗಿ ಜಿಲ್ಲಾ ದೈಹಿಕ ಅಧೀಕ್ಷಕರಾದ ರಂಗಸ್ವಾಮಿ. ತಾಲೂಕು ದೈಹಿಕ ಅಧೀಕ್ಷಕರಾದ ಪರಶುರಾಮ್. ಡಾ. ತಿಮ್ಮಪ್ಪ ವಡ್ಡೆಪಲ್ಲಿ ಡಾ. ಪೂಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಡಾ.ದಂಡಪ್ಪ ಬಿರಾದರ್ ಮಾತನಾಡಿ ನಮ್ಮ ತಂದೆಯವರಾದ ಅಯ್ಯಪ್ಪ ಬಿರಾದಾರ್ ಹೆಸರಿನ ಮೇಲೆ ಇದನ್ನು ನನ್ನ ಶಾಲೆಗೆ ದೇಣಿಗೆ ಯಾಗಿಕೊಡುತ್ತೇನೆ ಎಂದು ಹೇಳಿದರು. . ಅಪ್ಪಂದಿರ ದಿನಕ್ಕೆ ಒಳ್ಳೆಯ ಆಯ್ಕೆಯನ್ನು ಮಾಡಿಕೊಂಡಿದ್ದೀರಿ ಎಂದು ಸ್ನೇಹಿತರು ಹೇಳಿದರು.

## ಮಣ್ಣೂರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ



**ಕರಜಗಿ:ಜೂ.22:**ಅಫಜಲಪುರ ತಾಲೂಕಿನ ಮಣ್ಣೂರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತುವೇದಮೂರ್ತಿ ಹಾಲಯ್ಯ ಹಿರೇಮಠ ಕಾರ್ಯಕ್ರಮ ಉದ್ಘಾಟಿಸಿದರು.ಈ ಸಂದರ್ಭದಲ್ಲಿ ಯೋಗ ಶಿಕ್ಷಕ ನಾಗಯ್ಯ ಹಿರೇಮಠ. ಶಾಲಾ ಮಕ್ಕಳಿಗೆ ಯೋಗಾಸನದ ಬಗ್ಗೆ ಆಸನಗಳು ಮಾಡಿಸುವುದರ ಮೂಲಕ ಯೋಗದ ಬಗ್ಗೆ ಮಾಹಿತಿ ನೀಡಿ ಮಾತನಾಡಿ ಅಂತರಾಷ್ಟ್ರೀಯಯೋಗ ದಿನದಂದು ನಾವು ಕೇವಲ ಪ್ರದರ್ಶನಕ್ಕಾಗಿ ಯೋಗ ಮಾಡದೆ ಅದು ನಮ್ಮ ಜೀವನದ ನಿತ್ಯದ ದಿನಚರಿ ಮಾಡಿಕೊಳ್ಳೋಣ.ಸದೃಢ ಶರೀರ ಶಾಂತ ಮನಸ್ಸು ಮತ್ತು ಅಧ್ಯಾತ್ಮಿಕವಾಗಿ ಜಾಗೃತರಾಗೋಣ ಎಂದು ಹೇಳಿದರುಈ ಸಂದರ್ಭದಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆ, ಮೌಲಾನಾ ಅಬುಲ್ ಕಲಾಂ ಅಜಾದ್ ಶಾಲೆ, ರೇಣುಕಾ ಹಿರಿಯ ಪ್ರಾಥಮಿಕ ಮುಖ್ಯ ಗುರುಗಳು ಸಹಶಿಕ್ಷಕರು ವಿದ್ಯಾರ್ಥಿಗಳು ಇದ್ದರು

# 3.75 ಲಕ್ಷ ರೂ.ಮೌಲ್ಯದ 7 ಕೆ.ಜಿ.ಗಾಂಜಾ ಜಪ್ತಿ

**ಕಲಬುರಗಿ,ಜೂ.22**–ಕಮಲಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಸೊಂತ ಗ್ರಾಮದ ಸೀಮಾಂತರದಲ್ಲಿರುವ ಹೊಲದಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಯಲಾಗಿದೆ ಎಂಬ ಮಾಹಿತಿ ಮೇಲೆ ಕಲಬುರಗಿ ಗ್ರಾಮಾಂತರ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಲೋಕೇಶ್ವರಪ್ಪ ಅವರ ಮಾರ್ಗದರ್ಶನದಲ್ಲಿ ಗ್ರಾಮೀಣ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಶಿವಶಂಕರ ಸಾಹು ಅವರ ನೇತೃತ್ವದಲ್ಲಿ ಕಮಲಾಪುರ ಪಿಎಸ್‌ಐ ಸುಖಾನಂದ ಸಿಂಗೆ, ಸಿಬ್ಬಂದಿಗಳಾದ ಗುರುನಾಥ ರೆಡ್ಡಿ, ಸೈಯದ್ ಶಕೀಲ್, ಸುನೀಲ ಚವ್ಹಾಣ್, ಹುಸೇನ ಬಾಷಾ, ಬದ್ದು ರಾಠೋಡ್, ಸಮತೋಷ ಬಾರ್ಕಿ ಮತ್ತು ರೌಡಿ ನಿಗ್ರಹದಳದ ಸಿಬ್ಬಂದಿ ಕುಪೇಂದ್ರ, ಸಂಗಮೇಶ್ವರ ಅವರನ್ನು ಒಳಗೊಂಡ ತಂಡ ದಾಳಿ ನಡೆಸಿ ಸೊಂತ ಗ್ರಾಮದ ಮೇರಾಜ್ ತಂದೆ ಸಿರಾಜ್ ಪಟೇಲ್ ಎಂಬಾತನನ್ನು ಬಂಧಿಸಿ 3,75,500 ರೂ.ಮೌಲ್ಯದ 7 ಕೆ.ಜಿ., 470 ಗ್ರಾಂ.ಗಾಂಜಾ ಜಪ್ತಿ ಮಾಡಿದ್ದಾರೆ.



ಆರೋಪಿ ಮೇರಾಜ್ ವಿರುದ್ಧ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಎಸ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮವಾಗಿ ಗಾಂಜಾ ಬೆಳೆದ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

# ಚನ್ನವೀರ ಶರಣರಂತೆ ಬದುಕಿನ ಮೌಲ್ಯವರ್ಧನೆ ಮಾಡಿಕೊಳ್ಳಬೇಕು : ಶಿವಶಾಂತವೀರ ಶರಣರ ಕರೆ



**ಬಳ್ಳಾರಿ, ಜೂ. 22:**ಚನ್ನವೀರ ಶರಣರಂತೆ ಪ್ರತಿಯೊಬ್ಬರೂ ಜೀವನದಲ್ಲಿ ಬದುಕಿನ ಮೌಲ್ಯವರ್ಧನೆ ಮಾಡಿಕೊಳ್ಳಬೇಕೆಂದು ಶಿವಶಾಂತವೀರ ಶರಣರು ಭಕ್ತ ಸಮೂಹಕ್ಕಡ ಕರೆ ನೀಡಿದರು.

ನಗರದ ಬಸವ ಭವನದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಚಿಕೇನಕೊಪ್ಪದ ಚನ್ನವೀರ ಶರಣರ 31ನೇ ಪುಣ್ಯಸ್ಮರಣೋತ್ಸವ ಹಾಗೂ 1008 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ತಮ್ಮ ತುಲಾಭಾರದಲ್ಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಜೀವನದಲ್ಲಿ ಎದುರಾಗುವ ಸುಃಖ, ದುಃಖಗಳು ನಮ್ಮಲ್ಲಿ ಬದಲಾವಣೆಗೆ ಕಾರಣ ಆಗಲಿವೆ ಅದಕ್ಕಾಗಿ ಅವನ್ನು ನಾವು ಸಮಸ್ಥಿತಿಯಲ್ಲಿ ಕಾಣಬೇಕು ಎಂದರು.

ಬಳೂಟಗಿಯ ಸಿದ್ದೇಶ್ವರ ಶಾಸ್ತ್ರಿಗಳು, ಚನ್ನವೀರ ಶರಣರು ಮತ್ತು ಅಲ್ಲೀಪುರದ ಮಹಾದೇವ ತಾತನವರು ಸಮಕಾಲೀನರು. ಜಾತ್ಯಾತೀತರಾಗಿದ್ದ ಚನ್ನವೀರ ಶರಣರು ಸಮಾಜಮುಖಿ ಚಿಂತನೆಗಳ ಮೂಲಕ ನಮ್ಮೆಲ್ಲರ ನಡುವೆ ಚೈತನ್ಯವಂತರಾಗಿ ಈಗಲೂ ಇದ್ದಾರೆ. ಮೌನ, ಕಾಲ್ನಡಿಗೆ, ತಪಸ್ಸುಗಳ ಮೂಲಕ ಭಕ್ತರ ಮನಸ್ಸಲ್ಲಿ ಅಚ್ಚಳಿಯದೇ ಇರುವ ಚನ್ನವೀರ ಶರಣರು, ಮಾಡಿದ ಪವಾಡಗಳು, ತೋರಿದ ವಿಸ್ಮಯಗಳು ಸ್ಮರಣೀಯ ಎಂದರು.

ಸಿದ್ದಾಪುರ ಶಿವಲಿಂಗ ಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತ ಕೋರಿದರು.

ವಂದಲಿಯ ಪಂಡಿತ ವಿರೂಪಾಕ್ಷಯ್ಯ ಗವಾಯಿಗಳು ಸಂಗೀತ ಸೇವೆ ಸಲ್ಲಿಸಿದರು. ಕೊಪ್ಪಳ ಗವಿಮಠದ ಸಂಗೀತ ಶಿಕ್ಷಕ ವೀರೇಶ್ ಹಿಟ್ನಾಳ್ ಹಾರ್ಮೋನಿಯಂ ಸಾಥ್. ಗಂಗಾವತಿಯ ರಾಘವೇಂದ್ರ ತಬಲಾ ಸಾಥ್ ನೀಡಿದರು.ಬಸವರಾಜ್ ಅಮಾತಿ ಕಾರ್ಯಕ್ರಮ ನಿರೂಪಿಸಿದರು.

# ಚೌಳಿಕಮಾನದ ಅಲೆಮಾರಿ ಸಮುದಾಯಕ್ಕೆ ತಾತ್ಕಾಲಿಕ ನಿವೇಶನ ಕಲ್ಪಿಸಲು ಮನವಿ

**ಬೀದರ್:ಜೂ.22:** ಬೀದರ್ ನಗರದ ಚೌಳಿಕಮಾನ ಸಮೀಪ ಬೀದಿ ಬದಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯಗಳಾದ ಸಿಂದೋಳ, ಮಾಗರವಾಡಿ ಹಾಗೂ ಕೊರವ ಜನಾಂಗದ ಕುಟುಂಬಗಳಿಗೆ ಕಾರಂಜಾ ಗ್ರಾಮದ ಸರ್ವೆ ನಂ.45ರಲ್ಲಿ ತಾತ್ಕಾಲಿಕವಾಗಿ ವಾಸಿಸಲು ಜಾಗ ಮಂಜೂರು ಮಾಡುವಂತೆ ವಿಶ್ವಕ್ರಾಂತಿ ದಿವ್ಯಪೀಠದ ಅಧ್ಯಕ್ಷರಾದ ಓಂಪ್ರಕಾಶ ರೊಟ್ಟೆ ಅವರ ನೇತೃತ್ವದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ-ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ ಅವರಿಗೆ ಮನವಿ ಸಲ್ಲಿಸಲಾಗಿದೆ.

ಮನವಿಯಲ್ಲಿ, ಸಮಾಜ ಕಲ್ಯಾಣ ಇಲಾಖೆಯು ಸರ್ವೆ ನಂ.87ರಲ್ಲಿ ಎರಡು ಎಕರೆ ಜಮೀನು ಕಾಯ್ದಿರಿಸಿದ್ದರೂ ಅದು ವಾಸಯೋಗ್ಯವಲ್ಲ ಎಂದು ಈಗಾಗಲೇ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಇದೇ ವಿಷಯವನ್ನು ಏಪ್ರಿಲ್ 18, 2026ರಂದು ನಡೆದ ಸಭೆಯಲ್ಲಿಯೂ ಅಧ್ಯಕ್ಷರ ಗಮನಕ್ಕೆ ತರಲಾಗಿತ್ತು ಎಂದು ತಿಳಿಸಲಾಗಿದೆ.

ಕಾರಂಜಾ ಗ್ರಾಮದ ಸರ್ವೆ ನಂ.45ರಲ್ಲಿ ನಾಲ್ಕು ಎಕರೆ ಜಮೀನು ಲಭ್ಯವಿದ್ದು, ಅದರಲ್ಲಿ ಒಂದು ಎಕರೆ ಜಮೀನನ್ನು ಚೌಳಿಕಮಾನ ಸಮೀಪದ ಅಲೆಮಾರಿ ಸಮುದಾಯದವರಿಗೆ ನೀಡಲು ಅಗತ್ಯ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಹೀಗಾಗಿ ತಕ್ಷಣವೇ ಹದ್ದುಬಸ್ತು ಮಾಡಿ ಜಮೀನು ಹಸ್ತಾಂತರಿಸಲು ಸೂಚನೆ ನೀಡುವಂತೆ ಮನವಿ ಮಾಡಲಾಗಿದೆ.

ಪ್ರಸ್ತುತ ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಸ್ಥಳಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಭೂ ಮಾಲೀಕರ ಪರವಾಗಿ ಬಂದಿದ್ದು, ಗುಡಿಸಲುಗಳನ್ನು ತೆರವುಗೊಳಿಸುವಂತೆ ಪೊಲೀಸ್ ಠಾಣೆಯಲ್ಲಿಯೂ ದೂರು ದಾಖಲಾಗಿದೆ. ಜೂನ್



30ರೊಳಗೆ ಸ್ಥಳ ಖಾಲಿ ಮಾಡಲು ಕಾಲಾವಕಾಶ ನೀಡಲಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದಲ್ಲದೆ, ಏಪ್ರಿಲ್ 18ರಂದು ಅಧ್ಯಕ್ಷರು ಗುಡಿಸಲುಗಳಿಗೆ ಭೇಟಿ ನೀಡಿ ವಿದ್ಯುತ್, ಶೌಚಾಲಯ ಹಾಗೂ ಶುದ್ಧ ಕುಡಿಯುವ ನೀರಿನಂತಹ ಮೂಲಸೌಕರ್ಯ ಒದಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ ಇದುವರೆಗೆ ಯಾವುದೇ ಕಾಮಗಾರಿ ನಡೆದಿಲ್ಲ ಎಂದು ಆರೋಪಿಸಲಾಗಿದೆ.

ಅಲೆಮಾರಿ ಸಮುದಾಯದ ಬಡ ಕುಟುಂಬಗಳ ಮಾನವೀಯ ಸಮಸ್ಯೆಯನ್ನು ಪರಿಗಣಿಸಿ, ತಕ್ಷಣ ಕ್ರಮ ಕೈಗೊಂಡು ವಾಸಸ್ಥಳ ಹಾಗೂ ಮೂಲಸೌಕರ್ಯ ಒದಗಿಸುವಂತೆ ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ

# ಸರ್ವಜ್ಞ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಹಾಗೂ ವಿಶ್ವ ಸಂಗೀತ ದಿನಾಚರಣೆ




**ಕಲಬುರಗಿ:ಜೂ.22:** ನಗರದ ಜಸ್ಟಿಸ್ ಶಿವರಾಜ ವಿ. ಪಾಟೀಲ ಫೌಂಡೇಶನ್ (ರಿ) ಮತ್ತು ಸರ್ವಜ್ಞ ಪದವಿ ಪೂರ್ವ ವಿಜ್ಞಾನ ಕಾಲೇಜು ಹಾಗೂ ಶಾಲೆಯ ಸಂಯುಕ್ತ ಆಶ್ರಯದಲ್ಲಿ "ಅಂತರರಾಷ್ಟ್ರೀಯ ಯೋಗ ದಿನಾಚರಣೆ" ಮತ್ತು "ವಿಶ್ವ ಸಂಗೀತ ದಿನಾಚರಣೆ"ಯನ್ನು ಜಂಟಿಯಾಗಿ ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರೊ. ಚನ್ನಾರೆಡ್ಡಿ ಪಾಟೀಲ್ ಅವರು, "ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸು ಮತ್ತು ದೇಹವನ್ನು ಜೋಡಿಸುವ ಅದ್ಭುತ ಕಲೆ. ಇಂದಿನ ಒತ್ತಡದ ಜೀವನದಲ್ಲಿ ವಿದ್ಯಾರ್ಥಿಗಳು ತಮ್ಮ ಏಕಾಗ್ರತೆ, ಮಾನಸಿಕ ಸ್ಥಿರತೆ ಮತ್ತು ದೈಹಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಯೋಗವನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ" ಎಂದು ಕರೆ ನೀಡಿದರು.

ಇದೇ ವೇಳೆ ವಿಶ್ವ ಸಂಗೀತ ದಿನದ ಮಹತ್ವದ ಕುರಿತು ಮಾತನಾಡಿ, ಸಂಗೀತವು ಮನಸ್ಸಿಗೆ ಶಾಂತಿ ಮತ್ತು ಪ್ರಫುಲ್ಲತೆಯನ್ನು ನೀಡುವ ಅದ್ಭುತ ಶಕ್ತಿಯನ್ನು ಹೊಂದಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಾಗೂ ಮಾರ್ಗದರ್ಶಕರಾಗಿ ಆಗಮಿಸಿದ್ದ ಯೋಗ ಶಿಕ್ಷಕರು ಹಾಗೂ ನಿವೃತ್ತ ಭಾರತೀಯ ಸೇನೆಯ ದೈಹಿಕ ಶಿಕ್ಷಕರಾದ ಶ್ರೀ ರಾಚಪ್ಪ ಹಾಗೂ ಶ್ರೀ ಗುರುರಾಜ್ ಜಾಬೋ ಅವರು ವಿದ್ಯಾರ್ಥಿಗಳಿಗೆ ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಧ್ಯಾನದ ಕ್ರಮಗಳನ್ನು ಅತ್ಯಂತ ಪ್ರಭಾವಶಾಲಿಯಾಗಿ ಪ್ರಾತ್ಯಕ್ಷಿಕೆ ಮೂಲಕ ನಡೆಸಿಕೊಟ್ಟರು. ಕಾಲೇಜಿನ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಈ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡು, ಯೋಗಾಸನಗಳ ಪ್ರಯೋಜನಗಳನ್ನು ಪ್ರಾಯೋಗಿಕವಾಗಿ ತಿಳಿದುಕೊಂಡರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 28ರಿಂದ ವಾಡಿ ಹಲಕರ್ಟಿ ಶರೀಫರ 49ನೇ ಉರುಸ ಉತ್ಸವ



**ವಾಡಿ :ಜೂ.22:** ಚಿತ್ತಾಪುರ ತಾಲ್ಲೂಕಿನ ವಾಡಿ ಸಮೀಪದ ಹಲಕರ್ಟಿ ಗ್ರಾಮದ ಹಜರತ್ ಖಾಜಾ ಸೈಯದ್ ಖಾದ್ರಿ ಚಿಸ್ತಿ ಅವರು ಲಕ್ಷಾಂತರ ಭಕ್ತರನ್ನು ಹೊಂದಿರುವ ಈ ಭಾಗದ ಶ್ರೇಷ್ಠ ಧಾರ್ಮಿಕ ಸಂತ ಹಲಕರ್ಟಿ ಹಾಜರತ ಖಾವಾಜಾ ಸೈಯದ್ ಮಹಮ್ಮದ್ ಬಾದಶಾ ಖಾದ್ರಿ ಚಿಸ್ತಿ ಅವರ 49ನೇ ಉರಸ್ ಧಾರ್ಮಿಕ ಉತ್ಸವ ಕಾರ್ಯಕ್ರಮಗಳು ಜೂನ್ 28 ರಿಂದ 4 ದಿನಗಳ ಕಾಲ ದರ್ಗಾದ ಆವರಣದಲ್ಲಿ ಸಡಗರ ಸಂಭ್ರಮದಿಂದ ಜರುಗಲಿದೆ ಪಟ್ಟಣ ಸಮೀಪದ ಹಲಕರ್ಟಿ ದರ್ಗಾದಲ್ಲಿ ಉರುಸ ಸಿದ್ಧತೆಗಳು ಆರಂಭಗೊಂಡಿವೆ ಪ್ರತಿವರ್ಷದಂತೆ

ಉರಸ್ ಗೆ ಬರುವ ಭಕ್ತರಿಗೆ ಯಾವುದೇ ತೊಂದರೆ ಯಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದು ದರ್ಗದ ಧರ್ಮಧಿಕಾರಿ ಖಾವಾಜಾ ಸೈಯಾದ ಅಬು ತುರಾಬ್ ಶಾ ಖಾದ್ರಿ ಸುದ್ದಿಗರರಿಗೆ ತಿಳಿಸಿದರು ಜೂನ್ 28ರಂದು ಸಂಜೆ ಪವಿತ್ರ ಖುರಾನ್ ಪಠಣ ನಡೆಯಲಿದೆ ಸಂಜೆ ಹಲಕರ್ಟಿ ಹಜರತ ಖಾವಾಜಾ ಸೈಯದ ಮಹಮ್ಮದ್ ಬಾದಶಾ ಖಾದ್ರಿ ಚಿಸ್ತಿ ಅವರ ದರ್ಗಾ 7 ಗಂಟೆಗೆ ವಿವಿಧ ಧರ್ಮದ ಗುರುಗಳ ಸಮ್ಮುಖದಲ್ಲಿ ಸರ್ವಧರ್ಮ ಸಮ್ಮೇಳನ ಜರುಗಲಿದೆ ಸಮ್ಮೇಳನದಲ್ಲಿ ಜೈಭಾರತ ಮಾತಾ ಸೇವಾ ಸಮಿತಿ ರಾಷ್ಟ್ರೀಯ ಸಂಸ್ಥಾಪಕ ಅಧ್ಯಕ್ಷ ಹವಾ ಮಲಿನಾಥ ಮಹಾರಾಜ ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನ ಮಠದ ಚಿರಂಜೀವಿ ದೊಡ್ಡಪ್ಪ ಅಪ್ಪ ಹಲಕರ್ಟಿ ಕಟ್ಟಿಮನಿ ಹಿರೇಮಠದ ಮುನಿಂದ್ರ ಶಿವಾಚಾರ್ಯ ಅಲಹಳ್ಳಿಯ ನಾಗಪ್ಪಯ್ಯ ಸ್ವಾಮಿ ಪಾಳಾದ ಗುರುಮೂರ್ತಿ ಶಿವಾಚಾರ್ಯ ದೇಗಲ್ಮಟದ ಸಿದ್ದವಿರ ದೇವರು ಸಿದ್ದೇಶ್ವರ ಧ್ಯಾನಧಾಮದ ರಾಜಶೇಖರ ಶಿವಾಚಾರ್ಯ ಚಿತ್ತಾಪುರ ಸೋಮಶೇಖರ ಸ್ವಾಮೀಜಿ ಬಸವರಾಜ ದೇಶಮುಖ ರೋಷನ್ ಡಿಸೋಜಾ ಫಾಸ್ಟರ್ ಶುಭಾಶಚಂದ್ರ ಭಾಗವಹಿಸಲಿದ್ದಾರೆ ಜೂನ್ 29 ರಂದು ಹೈದರಾಬಾದ್ ದಿಂದ ವಿಶೇಷ ರೈಲು ಮೂಲಕ ಸಂದಲ ಪಟ್ಟಣಕ್ಕೆ ಆಗಮಿಸಲಿದೆ ರೈಲು ನಿಲ್ದಾಣದಿಂದ ಹಲಕರ್ಟಿ ದರ್ಗದವರೆಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮೆರವಣಿಗೆ ನಡೆಯಲಿದೆ ರಾತ್ರಿ ಜರುಗುವ ಆದ್ಯಾತ್ಮಿಕ ಸಭೆಯಲ್ಲಿ ಸಂತ ಜಾಲಿಯರ ಮಹತ್ವ ಕುರಿತು ವಿಶೇಷ ಉಪನ್ಯಾಸ ಆಯೋಜಿಸಲಾಗಿದೆ ಚಿಟಗುಪ್ಪದ ಹಜರತ್ ಖಾವಾಜಾ ಶೇಖ್ ಅಮಾನುಲ್ಲಾ ಶಾ ಖಾದ್ರಿ ಚಿಸ್ತಿ ಬಂದಾನವಾಜಿ ಸಜ್ಜಾದಾ ನಶೀನ್ ಅಬ್ದುಲ್ ಖಾದಿರ್ ಖಾದ್ರಿ ಸಯ್ಯದ್ ಅಮ್ಜದ್ ಖಾದ್ರಿ ಯೂಸುಫ್ ಭಾಯಿ ಶೇಖ್ ಅಲೀಮುದೀನ್ ಖಾದ್ರಿ ಮೋಹಮ್ಮದ ರುಕ್ನು ದ್ದೀನ್ ಖಾದ್ರಿ ಇದ್ದರು

# ಭೀಮಾತೀರ 6 ಜನರ ಹತ್ಯೆ ಪ್ರಕರಣ: ಪ್ರಮುಖ ಆರೋಪಿ ಮಹೇಶ್ ತಳವಾರ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ ಪೊಲೀಸರು



**ವಿಜಯಪುರ, ಜೂ. 22:** ಭೀಮಾತೀರದಲ್ಲಿ ನಡೆದ ಆರು ಜನರ ಸಾಮೂಹಿಕ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಮಹೇಶ್ ತಳವಾರನನ್ನು ಬಂಧಿಸುವ ವೇಳೆ ಪೊಲೀಸರು ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆದಿದ್ದಾರೆ.

ತಿಕೋಟಾ ತಾಲೂಕಿನ ಇಟ್ಟಂಗಿಹಾಳ ಗ್ರಾಮದ ಹೊರವಲಯದಲ್ಲಿ ಆರೋಪಿ ಮಹೇಶ್ ತಳವಾರನನ್ನು ಬಂಧಿಸಲು ಚಡಚಣ ಪೊಲೀಸರು ತೆರಳಿದ್ದ ವೇಳೆ ಆತ ಪೊಲೀಸರ ಮೇಲೆ ಕಲ್ಲು ತೂರಿ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಈ ಸಂದರ್ಭದಲ್ಲಿ ಆತ್ಮರಕ್ಷಣೆ ಹಾಗೂ ಬಂಧನದ ಉದ್ದೇಶದಿಂದ ಚಡಚಣ ಸಿಪಿಐ ಪರಶುರಾಮ ಮನಗೂಳಿ ಅವರು ಮಹೇಶನ ಬಲಗಾಲಿಗೆ ಗುಂಡು ಹಾರಿಸಿದ್ದು, ಬಳಿಕ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಘಟನೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಶೇಖರ್ ಪವಾರ್ ಹಾಗೂ ವಿಜಯಕುಮಾರ್ ಬನಸೋಡೆ ಗಾಯಗೊಂಡಿದ್ದು, ಇಬ್ಬರನ್ನೂ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಗಾಯಗೊಂಡ ಆರೋಪಿ ಮಹೇಶ್ ತಳವಾರನಿಗೂ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಮೇ 29ರಂದು ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದ ಸಮೀಪದ ಜಮೀನಿನಲ್ಲಿ ನಿರಾಳೆ ಕುಟುಂಬದ ಐವರು ಸೇರಿದಂತೆ ಒಟ್ಟು ಆರು ಜನರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಈ ಪ್ರಕರಣ ರಾಜ್ಯಾದ್ಯಂತ ಭಾರೀ ಸಂಚಲನ ಸೃಷ್ಟಿಸಿತ್ತು.

ಪ್ರಾಥಮಿಕ ತನಿಖೆಯ ಪ್ರಕಾರ, ಹತ್ಯೆ ನಡೆಸಲು ಸುಮಾರು ?15 ಲಕ್ಷ ಸುಪಾರಿ ಪಡೆದಿದ್ದ ಮಹೇಶ್ ತಳವಾರ ತನ್ನ ಸಹಚರರನ್ನು ಸೇರಿಸಿಕೊಂಡು ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಘಟನೆ ಬಳಿಕ ಸುಮಾರು 23 ದಿನಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಆರೋಪಿ ಕೊನೆಗೂ ಪೊಲೀಸ್ ಬಲೆಗೆ ಬಿದ್ದಿದ್ದಾನೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಲಕ್ಷ್ಮಣ ನಿಂಬರಗಿ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE